ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 17 | ಏಪ್ರಿಲ್ 22, 1984 | ಬೆಲೆ 60 ಪೈಸೆ

ನವದೆಹಲಿಯಲ್ಲಿ ವಿರೋಧ ಪಕ್ಷಗಳ ರಾಷ್ಟ್ರೀಯ ಸಮಾವೇಶ

ಪ್ರಜಾಪ್ರಭುತ್ವ ಚಳುವಳಿಯ ಮುನ್ನಡೆ

ವಿರೋಧ ಪಕ್ಷಗಳು ಕಳೆದ ವರ್ಷ ವಿಜಯವಾಡ, ನವದೆಹಲಿ ಮತ್ತು ಶ್ರೀನಗರಗಳಲ್ಲಿ ಸಮಾವೇಶಗಳನ್ನು ನಡೆಸಿದುವು. ಕೇಂದ್ರ-ರಾಜ್ಯ ಸಂಬಂಧಗಳು, ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ಸರಕಾರಗಳನ್ನು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ (ಐ) ಪಕ್ಷವು ಉರುಳಿಸಲು ಹಲವು ರೀತಿಯ ಪ್ರಯತ್ನಗಳನ್ನು ಸಂಚುಗಳನ್ನು ಮಾಡುವುದು, ಈ ದುಷ್ಕೃತ್ಯಗಳಲ್ಲಿ ರಾಜ್ಯಪಾಲರ ಪಾತ್ರ, ಕೇಂದ್ರ ಸರ್ಕಾರವು ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಗೆ ಮಲತಾಯಿ ಧೋರಣೆ ತೋರಿಸುವುದು, ರಾಜ್ಯ ಸರ್ಕಾರದ ಅಧಿಕಾರಗಳನ್ನು ಮೊಟಕುಗೊಳಿಸುವುದು, ವಿತ್ತ ಆಯೋಗದ ಮುಂದೆ ವಿರೋಧ ಪಕ್ಷಗಳ ಸರ್ಕಾರಗಳು ತಳೆಯಬೇಕಾದ ನಿಲುವು-ಈ ವಿಷಯಗಳನ್ನು ಆ ಮೂರು ಸಮಾವೇಶಗಳು ಚರ್ಚಿಸಿದುವು.

ರೈತರ ಬೆಳೆಗಳಿಗೆ ಲಾಭದಾಯಕ ಬೆಲೆ, ದಿನ ಬಳಕೆಯ ವಸ್ತುಗಳನ್ನು ನ್ಯಾಯ ಬೆಲೆಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಒದಗಿಸುವುದು, ಕೂಲಿಗಾಗಿ ಕಾಳು, ಕೆಲಸದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಸೇರಿಸುವುದು, ಜನಸಮೂಹವು ಬಳಸುವ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಕುಶಲಕರ್ಮಿಗಳು ಸೇರಿದಂತೆ ಎಲ್ಲಾ ಜನವಿಭಾಗಗಳಿಗೂ ಉದ್ಯೋಗಾವಕಾಶಗಳು ವಿಶಾಲವಾಗಿ ಬೆಳೆಯುವಂತೆ ಆರ್ಥಿಕ ನೀತಿಯನ್ನು ಪುನರ್ ರೂಪಿಸುವುದು, ಭೂಸುಧಾರಣಾ ಕಾನೂನನ್ನು ಜಾರಿ ಮಾಡುವುದು, ಈ ಕಾನೂನಿನಲ್ಲಿರುವ ಲೋಪದೋಷಗಳನ್ನು ಹೋಗಲಾಡಿಸುವುದು, ರಾಜ್ಯ ವಿಧಾನ ಸಭೆಗಳು ಅಂಗೀಕರಿಸಿರುವ ಭೂಸುಧಾರಣಾ ಮಸೂದೆಗಳು ತಡವಾಗದೆ ರಾಷ್ಟ್ರಪತಿಗಳು ಅಂಗೀಕಾರ ಕೊಡುವುದು, ರೈತರಿಗೆ ಕಡಿಮೆ ದರದ ಬಡ್ಡಿಯಲ್ಲಿ ಸಾಲ ಒದಗಿಸುವುದು, ಕೃಷಿ ಕೂಲಿಕಾರರಿಗೆ ಕನಿಷ್ಟ ಕೂಲಿ ಸಿಕ್ಕುವುದು, ಗ್ರಾಮೀಣ ಜನರ ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸುವುದು, ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆ ಬದಲಾಗಬೇಕು, ರಾಷ್ಟ್ರೀಯ ಭದ್ರತಾ ಶಾಸನ ಅಗತ್ಯ ಸೇವಾ ನಿರ್ವಹಣಾ ಶಾಸನಗಳು ರದ್ದಾಗಬೇಕು, ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿಯ ಬೇಡಿಕೆಗಳ ಪಟ್ಟಿಯನ್ನು ಕೇಂದ್ರ ಸರ್ಕಾರವು ಒಪ್ಪಬೇಕು, ಕೈಗಾರಿಕಾ ಘಟಕಗಳ ಮುಚ್ಚುವಿಕೆ ಮತ್ತು ಬೀಗಮುದ್ರೆಗಳು ಸಂಭವಿಸದಂತೆ ಮಾಡಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕು, ಶ್ರೀ ಸಾಮಾನ್ಯರ ವೆಚ್ಚದಲ್ಲಿ ಏಕಸ್ವಾಮ್ಯ ಸಂಸ್ಥೆಗಳನ್ನು ಬಹುರಾಷ್ಟ್ರೀಯ ಸಂಸ್ಥೆಗಳನ್ನು ಪ್ರೋತ್ಸಾಹಿಸಿ ಬೆಳೆಸುವ ಕೇಂದ್ರ ಸರ್ಕಾರದ ಬಂಡವಾಳ ಹೂಡುವ ಧೋರಣೆ ಬದಲಾಗಿ ಆರ್ಥಿಕ ಸ್ವಾವಲಂಬನೆಯ ರಾಷ್ಟ್ರೀಯ ಧೋರಣೆಯನ್ನು ಅನುಸರಿಸಬೇಕು, ಹರಿಜನರು ಗಿರಿಜನರ ಮೇಲೆ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ, ಮಹಿಳೆಯರ ಮತ್ತು ಸಮಾಜದ ಇತರ ದುರ್ಬಲ ವಿಭಾಗಗಳ ಮೇಲೆ ಮುಂದುವರಿಯುತ್ತಿರುವ ದಬ್ಬಾಳಿಕೆ ಆಕ್ರಮಣಗಳನ್ನು ನಿಲ್ಲಿಸಲು ಶಕ್ತಿಯುತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಅಂಶಗಳುಳ್ಳ ನಿರ್ಣಯವನ್ನು ಅಂಗೀಕರಿಸಿ ಮೂರು ಹಂತಗಳ ರಾಷ್ಟ್ರೀಯ ಚಳುವಳಿಯ ಕಾರ್ಯಕ್ರಮಕ್ಕೆ ಕರೆ ಕೊಟ್ಟು ಈ ವರ್ಷದ ಜನವರಿ 13, 14, 15 ರಂದು ಕಲ್ಕತ್ತದಲ್ಲಿ ನಡೆದ ವಿರೋಧ ಪಕ್ಷಗಳ ನಾಲ್ಕನೆಯ ಸಮಾವೇಶವು, ಜನರನ್ನು ಬಾಧಿಸುವ ಪ್ರಶ್ನೆಗಳಿಗೆ ಪ್ರಾಶಸ್ತ್ಯ ಕೊಟ್ಟು ದೇಶದ ಪ್ರಜಾಪ್ರಭುತ್ವ ಚಳುವಳಿಯ ಹಾದಿಯನ್ನು ಹಿಡಿಯಿತು.

ಕಲ್ಕತ್ತ ಸಮಾವೇಶವು ರೂಪಿಸಿದ ಮೂರು ಹಂತಗಳ ಚಳುವಳಿಯ ಕಾರ್ಯಕ್ರಮದ ಮೂರನೆಯ ಹಂತ ಮಾರ್ಚ್ ಕೊನೆಯಲ್ಲಿ ಒಂದು ರಾಷ್ಟ್ರೀಯ ಸಮಾವೇಶವನ್ನು ನಡೆಸಿ ಮುಂದಿನ ಚಳುವಳಿಯ ರೂಪುರೇಷೆಗಳನ್ನು ನಿರ್ಧರಿಸುವುದು.

ಮಾರ್ಚ್ 30 ರಂದು ನವದೆಹಲಿಯಲ್ಲಿ ನಡೆಯಬೇಕಿದ್ದ ರಾಷ್ಟ್ರೀಯ ಸಮಾವೇಶವು ಮಾರ್ಚ್ 29 ರಂದು ರಾಜ್ಯಸಭೆಯ ದ್ವೈವಾರ್ಷಿಕ ಚುನಾವಣೆ ಬಂದುದರಿಂದ ಮುಂದೂಡಲ್ಪಟ್ಟು ಏಪ್ರಿಲ್ 17 ರಂದು ನಡೆಯಿತು.

ನವದೆಹಲಿಯಲ್ಲಿ ಮೊನ್ನೆ ನಡೆದ ಈ ಸಮಾವೇಶದಲ್ಲಿ ಸಿಪಿಐ(ಎಂ), ಸಿಪಿಐ, ಆರ್‌ಎಸ್‌ಪಿ, ಫಾರ್ವರ್ಡ್ ಬ್ಲಾಕ್, ಜನತ, ಡಿಎಸ್‌ಪಿ, ಕಾಂಗ್ರೆಸ್ (ಎಸ್), ಜನವಾದಿ, ಕಾಂಗ್ರೆಸ್ (ಜೆ), ನ್ಯಾಷನಲ್ ಕಾನ್‌ಫರೆನ್ಸ್, ತೆಲುಗುದೇಶಂ, ಡಿಎಂಕೆ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಡಿಎಸ್‌ಪಿಯ ಹೇಮವತಿ ನಂದನ ಬಹುಗುಣರು ಸಮಾವೇಶದ ಅಧ್ಯಕ್ಷಮಂಡಳಿಯಲ್ಲಿದ್ದು ಸಮಾವೇಶದ ಕಾರ್ಯಕಲಾಪಗಳನ್ನು ನಡೆಸಿದರು.

ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ರಾಷ್ಟ್ರೀಯ ಸಮಾವೇಶವು ಅಂಗೀಕರಿಸಬೇಕಾದ ಪ್ರಸಿದ್ಧಿ ಪತ್ರವನ್ನು ಮಂಡಿಸಿದರು.

ಶ್ರೀಲಂಕಾದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದನ್ನು, ಅಲ್ಪಸಂಖ್ಯಾತ ತಮಿಳರ ಮೇಲೆ ಆಗುತ್ತಿರುವ ಹಿಂಸಾಚಾರ, ದೌರ್ಜನ್ಯಗಳನ್ನು ಖಂಡಿಸಿ ಶ್ರೀಲಂಕಾದಲ್ಲಿರುವ ತಮಿಳರಿಗೆ ಭದ್ರತೆಯನ್ನು ಒದಗಿಸಬೇಕು ಎಂದು ಶ್ರೀಲಂಕಾ ಸರ್ಕಾರವನ್ನು ಒತ್ತಾಯಿಸುವ ಒಂದು ಪ್ರತ್ಯೇಕ ನಿರ್ಣಯವನ್ನು ಸಮಾವೇಶವು ಅಂಗೀಕರಿಸಿತು.

ಪಂಜಾಬ್ ಮತ್ತು ಜಮ್ಮು ಕಾಶ್ಮೀರ ಪ್ರಶ್ನೆಗಳನ್ನು ಸಮಾವೇಶವು ಚರ್ಚಿಸಿತು.

(8ನೇ ಪುಟ ನೋಡಿ)

ಪಂಜಾಬ್ ಉಗ್ರಗಾಮಿಗಳ ಹಿಂಸಾಚಾರಕ್ಕೆ ಪೊಲಿಟ್ ಬ್ಯೂರೋ ಖಂಡನೆ

ಪಂಜಾಬಿನಲ್ಲಿ ಮುಂದುವರಿಯುತ್ತಿರುವ ಭಯೋತ್ಪಾದನೆ ಬೆಂಕಿ ಹಚ್ಚುವ ಕೃತ್ಯಗಳನ್ನು ಕುರಿತು ಸಿ.ಪಿ.ಐ. (ಎಂ)ನ ಪೊಲಿಟ್‌ಬ್ಯೂರೋ ತನ್ನ ತೀವ್ರ ವ್ಯಾಕುಲವನ್ನು ವ್ಯಕ್ತಪಡಿಸಿದೆ. 31 ರೈಲು ನಿಲ್ದಾಣಗಳನ್ನು ಸುಟ್ಟು ಹಾಕಿದ್ದು ತೀರಾ ಇತ್ತೀಚಿನ ಉದಾಹರಣೆ. ಇದಕ್ಕೂ ಹಿಂದೆ ಅಪಾರ ಸಾವು ನೋವುಗಳು, ದೊಂಬಿ ಕೊಲೆಗಳು ನಡೆದಿವೆ.

ಮುಂದುವರಿಯುತ್ತಿರುವ ಪೂರ್ವ ಯೋಜಿತ ಹಿಂಸಾಚಾರಗಳು ಪಂಜಾಬಿನ ಸಮಸ್ಯೆಗಳಿಗೆ ರಾಜಕೀಯ ಪರಿಹಾರ ಕಂಡು ಹಿಡಿಯುವ ಮೊದಲು ಕಾನೂನು ಮತ್ತು ಶಿಸ್ತು ವ್ಯವಸ್ಥೆಯನ್ನು ಸರಿಪಡಿಸುವತ್ತ ತಾವೀಗ ತಮ್ಮ ಗಮನವನ್ನು ಕೇಂದ್ರೀಕರಿಸಿರುವುದಾಗಿ ಆಡಳಿತಪಕ್ಷ ಹಾಗೂ ಕೇಂದ್ರ ಸರ್ಕಾರ ಹೇಳಿಕೊಳ್ಳುತ್ತಿರುವುದನ್ನು ಪರಿಹಾಸ್ಯ ಮಾಡುತ್ತಿರುವಂತಿದೆ.

ಕೇಂದ್ರ ಸರ್ಕಾರ ಪಂಜಾಬಿನ ಆಡಳಿತವನ್ನು ಕೈಗೆತ್ತಿಕೊಂಡು ಕಾನೂನು ಮತ್ತು ಶಿಸ್ತಿನ ಪುನರ್‌ಸ್ಥಾಪನೆಯೇ ತನ್ನ ಪ್ರಥಮ ಆದ್ಯತೆಯೆಂದು ಘೋಷಿಸಿ ಆರು ತಿಂಗಳ ಮೇಲಾಗಿದೆ. ತನ್ನ ಭರವಸೆಯನ್ನು ಈಡೇರಿಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ಸೋತಿರುವುದು ರಾಜಕೀಯ ಸಮಸ್ಯೆಗಳು ಮತ್ತು ಕಾನೂನು ಮತ್ತು ಶಿಸ್ತಿನ ಪುನರ್‌ಸ್ಥಾಪನೆಗಾಗಿ ಏಕಕಾಲದಲ್ಲಿ ಪ್ರಯತ್ನಿಸಬೇಕಾದ ಅಗತ್ಯವನ್ನು ಎತ್ತಿ ತೋರಿಸುತ್ತದೆ. ಸರ್ಕಾರವು ತನ್ನ ನಿಷ್ಕ್ರಿಯ ಧೋರಣೆಯನ್ನು ಬಿಟ್ಟುಕೊಟ್ಟು ಉಗ್ರಗಾಮಿಗಳ ಭಯೋತ್ಪಾದನೆಯ ವಿರುದ್ಧ ಹೋರಾಡಲು ಎಲ್ಲಾ ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳ ಸಹಕಾರ ಪಡೆಯುವುದರೊಂದಿಗೆ ರಾಜಕೀಯ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬೇಕೆಂದು ಪೊಲಿಟ್‌ಬ್ಯೂರೋ ಸರ್ಕಾರವನ್ನು ಒತ್ತಾಯಿಸಿದೆ.

ಅಕಾಲಿ ನಾಯಕತ್ವವು ಉಗ್ರಗಾಮಿಗಳು ಮತ್ತವರ ಉನ್ಮತ್ತ ಕೋಮು ಚಟುವಟಿಕೆಗಳಿಂದ ತನ್ನನ್ನು ಸ್ಪಷ್ಟವಾಗಿ ಬೇರ್ಪಡಿಸಿಕೊಳ್ಳುವುದರಲ್ಲಿ ಸೋತಿರುವುದಕ್ಕಾಗಿ ಪೊಲಿಟ್‌ಬ್ಯೂರೋ ತೀವ್ರವಾಗಿ ವಿಷಾದಿಸಿದೆ. ಅಕಾಲಿ ನಾಯಕತ್ವದ ಈ ಧೋರಣೆ ಸಂವಿಧಾನದ 25ನೇ ಕಲಮಿನ ಕುರಿತಂತೆ ಉಗ್ರಗಾಮಿಗಳ ಪ್ರತ್ಯೇಕತಾವಾದಕ್ಕೆ ಸಹಾಯ ಮಾಡುತ್ತದೆ. ಒಂದು ಜನಾಂಗವಾಗಿ ಸಿಖ್ಖರ ಪ್ರತ್ಯೇಕತಾ ಬೇಡಿಕೆಗಳಿಗೆ ಒತ್ತಾಯಿಸುವ ಅಕಾಲಿ ನಾಯಕತ್ವ ಪಂಜಾಬಿನ ಸಮಸ್ತ ಜನತೆಯ ಪ್ರಜಾಪ್ರಭುತ್ವ ಬೇಡಿಕೆಗಳಿಂದ ಭಿನ್ನವಾಗಿರುವುದು ಪಂಜಾಬ್ ಜನತೆಯ ಬೇಡಿಕೆಗಳಿಗೆ ಸರಿಯಾದ ಪರಿಹಾರ ಬಯಸುವ ದೇಶದ ಇತರ ಪ್ರಜಾಪ್ರಭುತ್ವ ಶಕ್ತಿಗಳಿಂದ ದೂರವಾಗಲು ಸಹಕರಿಸುತ್ತದೆ.

ಪಂಜಾಬ್ ಜನತೆಯ ಪ್ರಜಾಸತ್ತಾತ್ಮಕ ಬೇಡಿಕೆಗಳಿಗೆ ರಾಜಕೀಯ ಪರಿಹಾರ ಪಡೆಯುವ ದಿಕ್ಕಿನಲ್ಲಿ ಅಕಾಲಿ ನಾಯಕತ್ವವು ಉಳಿದ ಪ್ರಜಾಪ್ರಭುತ್ವ ಚಳವಳಿಯೊಂದಿಗೆ ಸೇರಿ ಉಗ್ರಗಾಮಿಗಳ ಛಿದ್ರಕಾರೀ ಚಟುವಟಿಕೆಗಳನ್ನು ಎದುರಿಸಬೇಕೆಂದು ಸಿ.ಪಿ.ಐ (ಎಂ)ನ ಪೊಲಿಟ್‌ಬ್ಯೂರೋ ಅಕಾಲಿ ನಾಯಕತ್ವಕ್ಕೆ ಕರೆ ನೀಡಿದೆ.

ತಾ. 18 ರಂದು ಸಂಸತ್ ಭವನದ ಮುಂದೆ ಕಾರ್ಮಿಕರ ಬೃಹತ್ ಪ್ರದರ್ಶನ

ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿಯ ಎರಡನೆಯ ಅಖಿಲ ಭಾರತ ಸಮಾವೇಶವು 1983 ರ ಆಗಸ್ಟ್ 21 ರಂದು ನವದೆಹಲಿಯಲ್ಲಿ ನಡೆದು ನಮ್ಮ ದೇಶದ ಕಾರ್ಮಿಕ ವರ್ಗವನ್ನು ಮತ್ತು ಜನಸಾಮಾನ್ಯರನ್ನು ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಒಂದು ಬೇಡಿಕೆಗಳ ಪಟ್ಟಿಯನ್ನು ರೂಪಿಸಿ ಅಖಿಲ ಭಾರತ ಚಳುವಳಿಗೆ ಕರೆಕೊಟ್ಟಿತು.

ಈ ಚಳುವಳಿಯ ಕಾರ್ಯಕ್ರಮದ ಅಂಗವಾಗಿ 20·1·1984 ರಂದು ನವದೆಹಲಿಯಲ್ಲಿ ಕೈಗಾರಿಕಾ ಘಟಕಗಳ ಮುಚ್ಚುವಿಕೆ, ಬೀಗಮುದ್ರೆ, ಲೇ-ಆಫ್, ರಿಟ್ರೆಂಚ್‌ಮೆಂಟ್ ಮತ್ತು ಡೀನೋಟಿಫಿಕೇಷನ್‌ಗಳ ವಿರುದ್ಧ ರಾಷ್ಟ್ರೀಯ ಸಮಾವೇಶವು ನಡೆದು ಈ ಕಾರ್ಮಿಕ ವಿರೋಧಿ ಕ್ರಮಗಳ ನಿವಾರಣೆಗೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ರೂಪಿಸಿ ಮಾರ್ಚ್ 15 ರ ಒಳಗೆ ರಾಜ್ಯ ಸಮಾವೇಶಗಳನ್ನು ನಡೆಸಿ, ಮಾರ್ಚ್ 19 ರಿಂದ 25 ರವರೆಗೆ ಸಪ್ತಾಹವನ್ನು ಆಚರಿಸಿ ಏಪ್ರಿಲ್‌ನಲ್ಲಿ ನವದೆಹಲಿಯಲ್ಲಿ ಪ್ರದರ್ಶನವನ್ನು ನಡೆಸಬೇಕೆಂದು ಕಾರ್ಮಿಕ ವರ್ಗಕ್ಕೆ ಕರೆ ಕೊಟ್ಟಿತು.

(8ನೇ ಪುಟ ನೋಡಿ)

ದಿನಗೂಲಿ ಕೆಲಸಗಾರರ ಸಮಸ್ಯೆಗಳು - ಪರಿಹಾರವು

— ಎನ್. ಕೆ. ಉಪಾಧ್ಯಾಯ

(ದಿನ ಗೂಲಿ ಕೆಲಸಗಾರರ ಸಮಸ್ಯೆಗಳೂ, ಪರಿಹಾರವು ಎಂಬ ವಿಷಯದ ಕುರಿತು ಉತ್ತರ ಕರ್ನಾಟಕದ ದಿನಗೂಲಿ ಕೆಲಸಗಾರರ ಫೆಡರೇಶನ್ 7-4-84 ರಂದು ಹುಬ್ಬಳ್ಳಿಯಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ರಾಜ್ಯ ಸಿ.ಐ.ಟಿ.ಯು. ಉಪಾಧ್ಯಕ್ಷರಾದ ಎನ್. ಕೆ. ಉಪಾಧ್ಯಾಯರು ಮಂಡಿಸಿದ ವಿಚಾರಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ)

ದಿನ ಗೂಲಿ ಕೆಲಸಗಾರರ ಸಮಸ್ಯೆ ಅತಿ ಕ್ಲಿಷ್ಟವಾಗಿದೆ. ಸರಕಾರದ ಲೋಕೋಪಯೋಗಿ, ನೀರಾವರಿ ಖಾತೆಗಳಲ್ಲಿ ಪ್ರಾರಂಭದಿಂದಲೂ ಅತಿ ಹೆಚ್ಚು ಸಂಖ್ಯೆಯಲ್ಲಿ ದಿನಗೂಲಿಗಳಿದ್ದಾರೆ. ಮಾನವತಾ ದೃಷ್ಟಿಯಿಂದ ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯ ಬೇಕಾಗಿದೆಂದು ಜನತಾ ಸರಕಾರದ ಲೋಕೋಪಯೋಗಿ ಮಂತ್ರಿ ದೇವೇಗೌಡರು ವಿಚಾರ ಸಂಕಿರಣವನ್ನು ಉದ್ಘಾಟನೆ ಮಾಡುತ್ತ ಹೇಳಿದರು.

ದಿನಗೂಲಿ ಕೆಲಸಗಾರರ ಸಮಸ್ಯೆಯನ್ನು ಮಾನವತಾ ದೃಷ್ಟಿಯಿಂದ ನೋಡುವುದು ಸರಿಯಲ್ಲ. ಯಾಕೆಂದರೆ ಸರಕಾರದ ಲೋಕೋಪಯೋಗಿ, ನೀರಾವರಿ, ಒಕ್ಕಲುತನ, ನೀರು ಪೂರೈಕೆ, ರೇಷ್ಮೆ, ಅರಣ್ಯ, ನಗರಸಭೆ, ಮಹಾಪಾಲಿಕೆ, ವಿಮಾನಗಾರಿಕೆ, ಡೈರಿ-ಹೀಗೆ ಸರಕಾರಿ, ಅರೆ ಸರಕಾರಿ ಪ್ರತಿಯೊಂದು ಶಾಖೆಯಲ್ಲಯೂ ಲಕ್ಷಾವಧಿ ದಿನಗೂಲಿ ಕೆಲಸಗಾರರನ್ನು ನೇಮಿಸಿ ಗುಲಾಮರ ಹೊಸ ವರ್ಗವನ್ನು ಹಿಂದಿನ ಕಾಂಗ್ರೆಸ್ ಸರಕಾರ ಹುಟ್ಟಿಸಿತ್ತು. ಈಗಿನ ಸರಕಾರವೂ ಅದನ್ನು ಮುಂದುವರಿಸುತ್ತ ಹೊರಟಿದೆ. ರಾಜ್ಯಾದ್ಯಂತ ನಡೆದಿರುವ ಕಳೆದ ಎರಡು ವರ್ಷಗಳ ತೀವ್ರ ಹೋರಾಟದ ಫಲವಾಗಿ ಜನತಾ ಸರಕಾರ ಭೂತವಾಗಿ ಬೆಳೆದು ನಿಂತಿರುವ ಈ ಸಮಸ್ಯೆಗೆ ಮಾನವೀಯ ದೃಷ್ಟಿಯಿಂದ ಪರಿಹಾರ ಕಂಡು ಹಿಡಿಯಲು ಹೊರಟಿದೆ. ತಿಂಗಳಿಗೆ ರೂ. 300 ಪಗಾರದ ಮೇಲೆ ಅಂದಾಜು 14 ಸಾವಿರ ಮಂದಿ ಕೂಲಿಗಳನ್ನು ಖಾಯಂ ಮಾಡಿರುವುದು, ನೀರಾವರಿಯಲ್ಲಿ ಎಂಟು ಸಾವಿರ ಪಟವಾರಿಗಳನ್ನೂ, ಡ್ರೈವರ್, ಕ್ಲೀನರ್‌ಗಳನ್ನೂ ಖಾಯಂಗೊಳಿಸುತ್ತೇವೆಂದು ಹೇಳಿರುವುದು ಸ್ವಾಗತಾರ್ಹ.

ದಿನಗೂಲಿ ಕೆಲಸಗಾರರ ಸಮಸ್ಯೆ ಕ್ಲಿಷ್ಟವಾಗಿ ಬೃಹದಾಕಾರವಾಗಿ ಬೆಳೆದು ಬರಲು ಕಾರಣವೇನು?

ಬಂಡವಾಳಶಾಹಿ ಪಥದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವ ಭಾರತ ದೇಶದಲ್ಲಿ, ಬಂಡವಾಳಶಾಹಿ ಪದ್ಧತಿಯಲ್ಲಿ ಹುಟ್ಟಿಕೊಂಡಿರುವ ಹಲವಾರು ಸಮಸ್ಯೆಗಳ ಪೈಕಿ ದಿನಗೂಲಿ ಕೆಲಸಗಾರರ ಸಮಸ್ಯೆಯೂ ಒಂದು. ಇಂದು ಅದು ಬೃಹದ್ರೂಪವಾಗಿ ಬೆಳೆದು ನಿಂತಿದೆ.

ವಿಭಜಿಸಿ ಆಳು ಎಂಬ ದುರುದ್ದೇಶದಿಂದಲೇ ಬ್ರಿಟಿಷರು ದಿನಗೂಲಿ ವರ್ಗವನ್ನು ಬೆಳೆಸಿದ್ದಾರೆ. ಇಂಗ್ಲೆಂಡಿನಲ್ಲಿ ಅಲ್ಲಿಯ ಸಮಾಜ ಮತ್ತು ಕಾರ್ಮಿಕ ವರ್ಗ ದಿನಗೂಲಿಯವರೆಂಬ ವರ್ಗವನ್ನುಂಟು ಮಾಡಲು ಅವಕಾಶ ಮಾಡಿಕೊಡದಿದ್ದರೂ, ವಸಾಹತು ಭಾರತ ದೇಶದಲ್ಲಿ ಅಂಥ ವರ್ಗ ಹುಟ್ಟಿಸುವಲ್ಲಿ ಬ್ರಿಟಿಷರು ಯಶಸ್ವಿಯಾದರು. ಈ ವರ್ಗ ಸಮಾಜದಲ್ಲಿ ಅಪಾರ ಅನ್ಯಾಯಕೊಳಗಾಗಿರುವುದರಿಂದ ಈ ಪದ್ಧತಿಯನ್ನು ಕಿತ್ತು ಹಾಕಬೇಕೆಂಬ ವಿಚಾರ ಸ್ವಾತಂತ್ರ್ಯ ಪಡೆದ ನಂತರದ ಕಾಂಗ್ರೆಸ್ ಸರಕಾರದ ಗಮನಕ್ಕೆ ಬರಲಿಲ್ಲ. ಬಂಡವಾಳಶಾಹಿ ಪಥದಲ್ಲೇ ಮುಂದುವರಿಯುವ ನಿರ್ಧಾರ ಮಾಡಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಆಡಳಿತೆಯ ಯಾವದೇ ಕಾಯಿದೆ-ಕಾನೂನುಗಳನ್ನಾಗಲೀ, ಪದ್ಧತಿಗಳನ್ನಾಗಲೀ ಬಿಟ್ಟು ಕೊಡಲು ಕಾಂಗ್ರೆಸ್ ತಯಾರಾಗಲಿಲ್ಲ. ಇಲ್ಲವಾದರೆ. ಸ್ವಾತಂತ್ರ್ಯ ಪಡೆಯುವಲ್ಲಿ ಕ್ರಾಂತಿಯಾಗುತ್ತಿದ್ದರೆ ಬ್ರಿಟಿಷರ ಆಳ್ವಿಕೆಯಲ್ಲಿಯ ಕಾನೂನು-ಕಾಯಿದೆಗಳಲ್ಲಿ ಸಮಗ್ರ ಬದಲಾವಣೆಯಾಗುತ್ತಿತ್ತು. ದಿನಗೂಲಿ ಕೆಲಸ ಮಾಡುವವರ ಸಮಸ್ಯೆಯನ್ನಾಗಲೀ, ಅವರ ದೊಡ್ಡ ಸೈನ್ಯವನ್ನಾಗಲೀ ಎದುರಿಸುವ ಸಂಭವವಿರುತ್ತಿರಲಿಲ್ಲ.

ರಶ್ಯಾ, ಚೀನಾ ಮುಂತಾದ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ದಿನಗೂಲಿ ಕೆಲಸಗಾರರ ಸಮಸ್ಯೆ ಎಂಬುದಿಲ್ಲ. ಹಣದ ಅಭಾವದ ಹೆಸರಿನಲ್ಲಿ ಅಂಥ ವರ್ಗವನ್ನು ಹುಟ್ಟಿಸುವ ಅಗತ್ಯವೂ ಇಲ್ಲ. ಅಲ್ಲಿಯ ಯೋಜನೆಗಳನ್ನು ಸುಯೋಜಿತ ರೀತಿಯಲ್ಲಿ ಕೈಗೊಳ್ಳಲಾಗುತ್ತಿದೆ. ಆ ಯೋಜನೆಗಳಿಗೆ ಬೇಕಾದ ಹಣ, ಜನ, ತಂತ್ರಜ್ಞರನ್ನೆಲ್ಲ ಸರಿಯಾಗಿಯೇ ಉಪಯೋಗಿಸಿಕೊಳ್ಳಲಾಗುವುದು. ಅಲ್ಲಿ ಯೋಜನೆಗಳನ್ನು ಕೈಗೊಳ್ಳುವಾಗ, ಹಣವನ್ನು ಯೋಜನೆಗಾಗಿಯೇ ವ್ಯಯ ಮಾಡಲಾಗುವುದಲ್ಲದೆ ಇಲ್ಲಿಯ ಹಾಗೆ ಅಧಿಕಾರಿಗಳ-ನೌಕರದಾರರ ಅತಿಥಿಗೃಹ, ಬಂಗ್ಲೆ, ಮನೆಗಳಿಗಾಗಿ ಅಲ್ಲ.

ನಮ್ಮಲ್ಲಿ ತಲೆಯ ಮೇಲೆ ನಿಂತು ಯೋಜನೆಗಳನ್ನು ಕೈಗೊಳ್ಳುತ್ತೇವೆ ಅಂದರೆ ಒಂದು ಯೋಜನೆಯ ಕೆಲಸ ಶುರುವಾಗುವ ಮುಂಚೆ ಅತಿಥಿಗೃಹ ಅಧಿಕಾರಿಗಳ ಬಂಗ್ಲೆ, ನೌಕರದಾರರ ಮನೆ, ರಸ್ತೆ ಅವರಿಗೆಲ್ಲತರದ ಸವಲತ್ತುಗಳು, ಜೀಪು, ಕಾರುಗಳು-ಇವುಗಳೆಲ್ಲ ಪೂರ್ಣಗೊಂಡನಂತರವೇ ಯೋಜನೆಯ ಕೆಲಸ ಆರಂಭವಾಗುವುದು. ಆದ್ದರಿಂದಲೇ ಪ್ರತಿಯೊಂದು ಯೋಜನಾ ಕೆಲಸದಲ್ಲೂ ಶೇ 10 ರಷ್ಟೇ ಕಾಯಂ ಕೆಲಸಗಾರರಿದ್ದು 90 ರಷ್ಟು ದಿನಗೂಲಿ ಗಳಿದ್ದಾರೆ (ಇವರಲ್ಲಿ ಇಂಜಿನಿಯರರು, ಬೆರಳಚ್ಚುಗಾರರು, ಸೂಪರ್‌ವೈಸರರು, ಓವರಸಿಯರ್, ಉತ್ತಮ ಶಿಕ್ಷಣ ಪಡೆದವರೆಲ್ಲ ಸೇರಿಕೊಂಡಿರುತ್ತಾರೆ) ನೌಕರಿಯ ಅನಿಶ್ಚಿತ ಪರಿಸ್ಥಿತಿ, ಕಡಿಮೆ ವೇತನ, ಭತ್ಯೆ, ರಜೆ, ಕಾಯಂ ನೌಕರಿ ಮತ್ತಿನ್ನಿತರ ಸೌಲಭ್ಯಗಳ ನಿರಾಕರಣೆ, ಅಧಿಕಾರಿಗಳ "ಮರ್ಜಿ" ಕಾಯ್ದು ಕೊಳ್ಳದಿದ್ದರೆ ಮನೆಗಪ್ಪಣೆ, ಕಂಟ್ರಾಕ್ಟದಾರರ-ಅಧಿಕಾರಿಗಳ ಭ್ರಷ್ಟಾಚಾರಕ್ಕೆ ಒಳಸಂಚಿಗೆ ಬಲಿ ಪಶು ಆಗುವುದು-ಇವೆಲ್ಲ ದಿನಗೂಲಿಯವರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳು. ಐದುನೂರಿಂದ ಮೂರು ಸಾವಿರದ ಸ್ಕೇಲಿನಲ್ಲಿ ದುಡಿಯುತ್ತಿರುವ ಕೂಲಿಗಾರ, ನೌಕರ, ಅಧಿಕಾರಿಗಳಂತೆಯೇ ಇವರೂ ದುಡಿಯಬೇಕು. ಅವರಿಗಿಂತಲೂ ಹೆಚ್ಚು ದುಡಿಯಬೇಕು. ಆದರೆ ಇವರಿಗೆಲ್ಲ ಕೈಗೆಟಕುವುದು ದಿನ ಒಂದಕ್ಕೆ ಬರೀ ಐದು ರೂಪಾಯಿಯಿಂದ ಹದಿನೆಂಟು ಇಪ್ಪತ್ತು ರೂಪಾಯಿ ಮಾತ್ರ. ತಿಂಗಳಿಗೆ ಇಪ್ಪತ್ತಾರು ದಿವಸ ಕೆಲಸವಿಲ್ಲ. "ಸಾಹೇಬರ" ಮರ್ಜಿಗೆ ದಿನಗೂಲಿ ಸಹಿ. ಮನೆಯಲ್ಲಿ ಸೀರೆ ಒಗೆಯಬೇಕು, ಕಟ್ಟಿಗೆ ಒಡೆಯಬೇಕು, ಮಗು ಪಾಲಿಸಬೇಕು, ಯಜಮಾನಿಯ, ಸಾಹೇಬರ "ಎಲ್ಲ" ಕೆಲಸಗಳನ್ನೂ ನೆರವೇರಿಸಲೇ ಬೇಕು.

ಸಮಸ್ಯೆಗೆ ಪರಿಹಾರ

ಎಲ್ಲ ಸಮಸ್ಯೆಗಳಿಗೂ ಪರಿಹಾರ ಉಂಟು. ಹಾಗೆಯೇ ಈ ಸಮಸ್ಯೆಗೂ ಪರಿಹಾರ ಒದಗಿಸಬಹುದು! ಅದಕ್ಕೆ ಸಮತಾವಾದಿ, ಶಾಸ್ತ್ರೀಯ ದೃಷ್ಟಿಕೋನ ದೃಢ ನಿಲುವು ಅಗ .

ನಮ್ಮ ದೇಶ ಅಭಿವೃದ್ಧಿಗೊಳ್ಳಬೇಕಾಗಿದೆ. ಅದಕ್ಕಾಗಿ ನೂರಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತೇವೆ. ಅಂಥ ಯೋಜನೆಗಳಿಗೆ ವಿದೇಶಿ ನೆರವನ್ನೂ ಅಪಾರವಾಗಿ ಪಡೆಯುತ್ತಿದ್ದೇವೆ.

ಬಂಡವಾಳಶಾಹಿ ಪದ್ಧತಿಗನುಸಾರವಾಗಿ ಈ ಯೋಜನೆಗಳನ್ನು ರೂಪಿಸಿ ಕಾರ್ಯಗತ ಮಾಡುವುದರಿಂದ ನಿರ್ಧರಿತ ಅವಧಿಯಲ್ಲಿ ಅವು ಪೂರ್ಣಗೊಳ್ಳುವದಿಲ್ಲ. ನಮ್ಮ ಯೋಜನೆಗಳ ಕಾರ್ಯಪದ್ಧತಿಯನ್ನು ವೀಕ್ಷಿಸಿದರೆ ಹತ್ತು ವರ್ಷಗಳಲ್ಲಿ ತಿಪೂರ್ಗೊಳ್ಳಬೇಕಾದ ಯೋಜನೆಗೆ ಇಪ್ಪತ್ತು ಇಪ್ಪತ್ತೈದು ವರ್ಷ ಹಿಡಿಯುತ್ತದೆ. ಯೋಜನೆಗಳ ಮೇಲೆ ಯೋಜನೆಗಳು ಮುಂದೆ ಬರುತ್ತಲೇ ಇವೆ. ಒಬ್ಬ ನೌಕರದಾರರ ಕೆಲಸದ ಅವಧಿ 25 ರಿಂದ 30 ವರ್ಷವೆಂದು ಪರಿಗಣಿಸಿದರೂ ಕೂಡ ಒಂದು ದೊಡ್ಡ ಯೋಜನೆ ಪೂರ್ತಿಗೊಳ್ಳಬೇಕಾದರೆ ಅದರ ಕಾರ್ಯ ಪ್ರಾರಂಭಿಸಿದಾಗ ನೇಮಿಸಲ್ಪಟ್ಟ ಕೆಲಸಗಾರರೆಲ್ಲ ನಿವೃತ್ತರಾಗುವ ಅವಧಿ ಸಮಾಪಿಸುತ್ತಾರೆ. ಕಡಿಮೆ ಅವಧಿಯ ಕೆಲಸಗಳಲ್ಲಿರುವವರಿಗೂ ತೊಂದರೆಯಿಲ್ಲ. ಮತ್ತೊಂದು ಕೆಲಸ ಇದ್ದೇ ಇದೆ. ಅರಣ್ಯ, ನೀರು ಸರಬರಾಜು, ರೇಷ್ಮೆ, ಪೌರಸಮಿತಿ ಮುಂತಾದ ಖಾತೆಗಳಲ್ಲಿಯಂತೂ ಖಾತೆ ಇರುವ ತನಕ ನೌಕರದಾರರು ಬೇಕೇ ಬೇಕು. ಹೀಗಿರುವಾಗ ಕಾಯಂ ನೌಕರದಾರರು ದಿನಗೂಲಿಗಳೆಂಬ ವ್ಯತ್ಯಾಸವೇಕೆ?

ಹಣದ ಅಭಾವಕ್ಕಾಗಿ ಈ ರೀತಿ ಮಾಡಲಾಗಿತ್ತು. ಈಗ ಇವರನ್ನೆಲ್ಲ ಕಾಯಂ ಮಾಡಿ ಎಲ್ಲ ಸೌಕರ್ಯಗಳನ್ನೊದಗಿಸಬೇಕಾದರೆ ಹಣ ಬೇಕು ಎಂಬ ವಾದ ಸರಕಾರದಿಂದ ಕೇಳಿಬರುತ್ತದೆ. ಇದು ಹುರುಳಿಲ್ಲದ ವಾದ. ಕಾಯಂ ನೌಕರರು ದಿನಗೂಲಿ ನೌಕರರು ಎಂಬ ಸಮಸ್ಯೆಯ ಕುರಿತು ಶಾಸ್ತ್ರೀಯ ಅಭ್ಯಾಸ ಮಾಡದೆ ಈ ರೀತಿ ತೊಳಲಾಡಬೇಕಾಗಿದೆ. ಕೆಲವೇ ನಿರ್ದಿಷ್ಟ ಕೆಲಸ ಮಾಡಲಿಕ್ಕೆ ದಿನಗೂಲಿ ತಾತ್ಪೂರ್ತಿಕ ಕೆಲಸಗಾರರನ್ನು ನೇಮಿಸಿಕೊಳ್ಳಬಹುದಾಗಿದೆ. ಸದ್ಯ ನೇಮಿಸಿಗೊಂಡವರೆಲ್ಲ ಕಳೆದ 30-40 ವರ್ಷಗಳಿಂದಲೂ ದುಡಿಯುತ್ತಿದ್ದಾರೆ. ಹಾಗೆಯೇ ಈಗ ನೌಕರಿಯಲ್ಲಿರುವವರೂ ಮುಪ್ಪಾಗುವವರೆಗೂ ದುಡಿಯುವವರೆ. ಇವರ ಅನುಭವಗಳು ಬೇರೆ ಅಭಿವೃದ್ಧಿ ಕೆಲಸಗಳಿಗೂ ಲಭ್ಯವಾಗಬೇಕು. ಹಣದ ಅಭಾವದ ಪ್ರಶ್ನೆಯೇ ಅಡ್ಡಬರುವದಿಲ್ಲ. ಯೋಜನೆ ಮಾಡುವಾಗ ಅಂಥ ಯೋಜನೆಗಾಗಿ ಕೆಲಸ ಮಾಡುವವರ ಸಂಬಳ ಖರ್ಚು ಸೇರಿಕೊಂಡಿರುತ್ತದೆ. ಈಗಿರುವ ಬಂಡವಾಳಶಾಹಿ ಪದ್ಧತಿಯಲ್ಲಿ ದೈನಂದಿನ ಬೆಲೆ ಹೆಚ್ಚಳ, ಕಂಟ್ರಾಕ್ಟರರ ಸುಲಿಗೆ ಅಧಿಕಾರಿಗಳ ದುಂದುವೆಚ್ಚಗಳಿಂದಾಗಿ ಹಾನಿಯಾಗುತ್ತಿದೆ. ದಿನಗೂಲಿ ಜನರನ್ನು ಕಾಯಂಗೊಳಿಸುವುದರಿಂದಲ್ಲ.

ಕಳೆದ 20-25 ವರ್ಷಗಳಿಂದ ಲೋಕೋಪಯೋಗಿ ದಿನಗೂಲಿ ಕೆಲಸಗಾರರು ಹೋರಾಡುತ್ತಲೇ ಬಂದಿದ್ದಾರೆ

ಆದರೆ ಆಗ ರಾಜ್ಯಾದ್ಯಂತ ಸಂಘಟನೆ ಇರಲಿಲ್ಲ. ಕಳೆದೆರಡು ವರ್ಷಗಳಿಂದ ರಾಜ್ಯಮಟ್ಟದಲ್ಲಿ ಸಂಘಟನೆ ಬೆಳೆದು ಹಲವಾರು ಹೋರಾಟಗಳು ನಡೆದಿವೆ.

ಹೋರಾಟವಿಲ್ಲದೆ ಬಂಡವಾಳಶಾಹಿ ಸರಕಾರ ಸಮಸ್ಯೆ ಪರಿಹರಿಸಲು ಮುಂದೆ ಬರುವುದಿಲ್ಲ. ಐಕ್ಯತೆಯ ಹೋರಾಟಗಳಿಂದ ಮಾತ್ರ ಬೇಡಿಕೆ ಪಡೆಯಲು ಸಾಧ್ಯ. ಕಳೆದೆರಡು ವರ್ಷಗಳ ಹೋರಾಟದ ಫಲವಾಗಿಯೇ ಮೈಲ ಕೂಲಿಗಳನ್ನು, ನೀರಾವರಿ ದಿನ ಕೂಲಿಗಳನ್ನೂ ರೂ 300 ಸಂಬಳದ ಹಾಗೆಯೇ ಇತರ ನಿವೃತ್ತಿ ಸೌಲಭ್ಯಗಳೊಂದಿಗೆ ಕಾಯಂಗೊಳಿಸಲಾಗಿದೆ.

ನಿವೃತ್ತಿ ವೇತನ ಮಾತ್ರ ನಿರಾಕರಿಸಲಾಗಿದೆ. ದೇವೇಗೌಡರು ಹೇಳುವಂತೆ ಮಾನವತಾ ದೃಷ್ಟಿಯಿಂದ ಇವರೆನ್ನೆಲ್ಲ ಕಾಯಂ ಮಾಡಿರುವುದಿಲ್ಲ. ದಿನಗೂಲಿ ಕೆಲಸಗಾರರ ಹೋರಾಟದ ಫಲವಾಗಿ ಎಂಬುದನ್ನು ಮರೆಯಬಾರದು.

ಹೋರಾಟ ಮುಂದುವರಿಯುತ್ತಲೇ ಇರಬೇಕು. ದೀರ್ಘಕಾಲದ ಹೋರಾಟ ನಡೆಸಲು ತಯಾರಾಗಬೇಕು. ಅದರ ಜೊತೆಯಲ್ಲಿಯೇ ರಾಜಕೀಯ ತಿಳುವಳಿಕೆ ಪಡೆಯಬೇಕು ಬಂಡವಾಳಶಾಹಿ ಪದ್ಧತಿಯಿಂದಾಗಿಯೇ ದಿನಗೂಲಿ ಸಮಸ್ಯೆ ಹುಟ್ಟಿಬಂದಿದೆ. ಅದರ ನಿರ್ಮೂಲನೆಯಾಗಬೇಕಾದರೆ ಬಂಡವಾಳಶಾಹಿ ಪದ್ಧತಿ ನಾಶವಾಗಬೇಕಾಗಿದೆ. ಕಾಯಂ ನೌಕರಿಗಾಗಿ ದುಡಿಯುವಾಗಲೆ ಬಂಡವಾಳಶಾಹಿ ಪದ್ಧತಿಯ ವಿರುದ್ಧ ಕೂಡ ಹೋರಾಡಲು ಮುಂದಾಗುವುದು ಅಗತ್ಯ.

★

ಟೋರಿನೋ ಕಾರ್ಮಿಕರ ಗೆಲುವು

ಬೆಂಗಳೂರು ಸಾಫ್ಟ್ ಡ್ರಿಂಕ್ಸ್ (ಟೋರಿನೋ) ಕಾರ್ಮಿಕರು ಸುಮಾರು ಒಂದು ವರ್ಷಗಳಿಂದಲೂ ಕೆಲವು ಬೇಡಿಕೆಗಳಿಗಾಗಿ ಒತ್ತಾಯಿಸುತ್ತಾ ಬಂದಿದ್ದರು. ಆದರೆ ಮಾಲೀಕರು ಕಂಪೆನಿ ನಷ್ಟದಲ್ಲಿದೆಯೆಂಬ ಕಾರಣವೊಡ್ಡಿ ಬೇಡಿಕೆಗಳನ್ನು ನಿರಾಕರಿಸಿದ್ದರು. ಇದನ್ನು ಪ್ರತಿಭಟಿಸಿ ಕಾರ್ಮಿಕರು ಮಾರ್ಚ್ 21 ರಿಂದ ಮುಷ್ಕರಕ್ಕಿಳಿದರು. ನಂತರ ಮಾಲೀಕರು ಮಾರ್ಚ್ 30 ರಂದು ಒಂದು ಒಪ್ಪಂದಕ್ಕೆ ಬಂದಿದ್ದಾರೆ. ಆ ಪ್ರಕಾರ ಕನಿಷ್ಠ ಸಂಬಳ ತಿಂಗಳಿಗೆ 530 ರೂ ಆಗಿದೆ, ಸಂಬಳದಲ್ಲಿ ಅದರಿಂದ 70 ರೂ. ಹೆಚ್ಚಳ, ಡಿ.ಎ. ಪ್ರತಿ ಪಾಯಿಂಟಿಗೆ 1.30 ರೂ 1982-83 ನೇ ಸಾಲಿಗೆ ಶೇ. 18 ಬೋನಸ್, 15 ಮಂದಿ ಕೂಲಿ ಕಾರ್ಮಿಕರ ಖಾಯಂ, 12 ವರ್ಷ ಸೇವೆ ಸಲ್ಲಿಸಿದ ಕಾರ್ಮಿಕರಿಗೆ ಒಂದು ಎಚ್.ಎಂ.ಟಿ. ಕೈಗಡಿಯಾರ ಸಮವಸ್ತ್ರ, ಬೂಟ್ಸ್ ಮತ್ತಿತರ ಸೌಲಭ್ಯಗಳು ದೊರೆತಿವೆ.

ಪಶ್ಚಿಮ ಬಂಗಾಲ : ಭೂ ಸುಧಾರಣೆಯಲ್ಲಿ ಮುನ್ನಡೆ

ಪಶ್ಚಿಮ ಬಂಗಾಲ ಎಡರಂಗ ಸರಕಾರದ ಗ್ರಾಮಾಂತರ ಅಭಿವೃದ್ಧಿ ಯೋಜನೆಯಲ್ಲಿ ಭೂ ಸುಧಾರಣೆ ಬಹಳ ಮಹತ್ವದ ಪಾತ್ರ ವಹಿಸುತ್ತಿದೆ. ಆದ್ದರಿಂದಲೇ ಅದರ ಅನುಷ್ಠಾನಕ್ಕೆ ಪ್ರಾಧಾನ್ಯತೆ ಕೊಡಲಾಗಿದೆ. ಭೂಹಿಡುವಳಿ ಗರಿಷ್ಠ ಮಿತಿಗಿಂತ ಮಿಕ್ಕಿದ ಹೆಚ್ಚುವರಿ ಭೂಮಿಯನ್ನು ಗುರುತಿಸಿ ಹಂಚುವುದಕ್ಕೆ ಮಹತ್ವ ಕೊಡಲಾಗುತ್ತಿದೆ. ಸರಕಾರ ಕೈಗೊಳ್ಳುವ ಪ್ರತಿಯೊಂದು ಅಭಿವೃದ್ಧಿ ಕಾರ್ಯದಲ್ಲಿಯೂ ಜನತೆ ಸಕ್ರಿಯ ಪಾತ್ರ ವಹಿಸಬೇಕೆಂಬ ತತ್ವಕ್ಕನುಗುಣವಾಗಿ, ಅಂಥ ಯೋಜನೆಗಳಲ್ಲೊಳಗೊಂಡ ನಾನಾ ತರದ ಯೋಜನೆಗಳನ್ನು ಕಾರ್ಯ ರೂಪದಲ್ಲಿ ತರುವ ಮಹತ್ವದ ಜವಾಬ್ದಾರಿಯನ್ನು ಪಂಚಾಯತ್ ಸಂಘಟನೆಗಳಿಗೆ ಒಪ್ಪಿಸಲಾಗಿದೆ.

ಪಶ್ಚಿಮ ಬಂಗಾಲದ ಗ್ರಾಮಾಂತರ ಸಮಾಜ ಮತ್ತು ಆರ್ಥಿಕ ಪದ್ಧತಿಯಲ್ಲಿ ಬೆಳವಣಿಗೆ ತರಲು ಎಡರಂಗ ಸರಕಾರ ಕೈಗೊಂಡಿರುವ ಕಾರ್ಯಕ್ರಮಗಳಲ್ಲಿ ಭೂ ಸುಧಾರಣೆಯೂ ಒಂದಾಗಿದೆ. ನಿಜವಾಗಿ ನೋಡಿದರೆ ಬಡತನ ನಿವಾರಣೆಗಾಗಿ ಪಶ್ಚಿಮ ಬಂಗಾಲದ ಎಡರಂಗ ಸರಕಾರ ಭೂ ಸುಧಾರಣೆಗಳ ಕಾರ್ಯಕ್ರಮಗಳಿಗೆ ಅತ್ಯಂತ ಹೆಚ್ಚಿನ ಮಹತ್ವ ಕೊಟ್ಟಿದೆ.

ಆಪರೇಶನ್ ಬರ್ಗಾ

ಭೂ ಸುಧಾರಣಾ ಕಾರ್ಯಕ್ರಮಕ್ಕನುಸಾರವಾಗಿ ಪ್ರಥಮ ಘಟ್ಟದಲ್ಲಿ ಬರಗದಾರರ (ಪಾಲುಗಾರರ) ಹೆಸರುಗಳನ್ನು ನೋಂದಾಯಿಸುವ ಪ್ರಯತ್ನ ನಡೆಯಿತು. 1978 ಸೆಪ್ಟೆಂಬರ್ ತಿಂಗಳಲ್ಲಿ "ಆಪರೇಶನ್ ಬರ್ಗಾ" ಎಂಬ ವಿಶೇಷ ಕಾರ್ಯಕ್ರಮವನ್ನು ಸರಕಾರ ಹಮ್ಮಿಕೊಂಡಿತು.

ಭೂಮಿಯನ್ನು ಹಂಚುವ ಸರ್ವಸಾಧಾರಣ ಕಾರ್ಯದ ಜೊತೆಯಲ್ಲಿಯೇ, ಬಹಳ ಮಹತ್ವದ ಭೂ ಸುಧಾರಣೆಯ ಕಾರ್ಯವೆಂದು ಎಲ್ಲೆಡೆ ಪ್ರಖ್ಯಾತಿ ಪಡೆದಂತ ಆಪರೇಶನ್ ಬರ್ಗಾ ಕೆಲಸವೂ ಮುಂದೆ ಸಾಗುತ್ತಲಿದೆ. 30-4-1983 ರ ತನಕ 12-33 ಲಕ್ಷ ಬರಗದಾರರ ಹೆಸರುಗಳನ್ನು ನೋಂದಾಯಿಸಲಾಗಿದೆ.

ಪಟ್ಟಾ ವಿತರಣೆ

ಎರಡನೆಯದಾಗಿ ಪಟ್ಟಾಗಳನ್ನು ಕೊಡುವ ಮೂಲಕ ಭೂ ಹೀನರಿಗೆ ಮತ್ತು ಸಣ್ಣ ರೈತರಿಗೆ ಭೂ ಮಾಲಕರ ಹೆಚ್ಚುವರಿ ಭೂಮಿಯನ್ನು ಹಂಚುವುದಕ್ಕೆ ಮಹತ್ವ ಕೊಡಲಾಗಿದೆ. ಭೂಮಿ ಮತ್ತು ಪಟ್ಟಾ ಹಂಚುವ ಕಾರ್ಯಕ್ರಮವನ್ನು ಎಡರಂಗ ಸರಕಾರ 1979 ರಲ್ಲೇ ಶುರುಮಾಡಿತ್ತು. 30-4-1980 ರವರೆಗೆ ಒಟ್ಟು 7-63 ಲಕ್ಷ ಎಕರೆ ಒಕ್ಕಲತನ ಭೂಮಿಯನ್ನು ಹಂಚಲಾಗಿದೆ.

ಆರ್ಥಿಕ ಸಹಾಯ

ಭೂ ಸುಧಾರಣೆಯಿಂದಾಗಿ ಲಾಭ ಪಡೆಯುವವರಿಗೆ ಅಂದರೆ ಪಟ್ಟಾ ಪಡೆದವರಿಗೂ ಬರಗದಾರರಿಗೂ ಹಣ ಸಹಾಯ ಮಾಡುವ ವ್ಯವಸ್ಥೆಯಿಲ್ಲದಿದ್ದರೆ ಎಂಥ ಭೂ ಸುಧಾರಣಾ ಕಾರ್ಯವೂ ವಿಫಲಗೊಳ್ಳುವುದರಲ್ಲಿ ಸಂಶಯವಿಲ್ಲ. ಈ ರೀತಿ ಭೂಮಿ ಪಡೆದವರಲ್ಲಿ ಅತಿ ಹೆಚ್ಚಿನವರನ್ನು ಆರ್ಥಿಕ ಸಹಾಯ ಒದಗಿಸುವ ಸಂಸ್ಥೆಗಳೊಳ ಪಡಿಸುವುದಕ್ಕೆ ಸರಕಾರ ಪ್ರಯತ್ನ ನಡೆಸಿದೆ. 1979, 1980, 1981 ರಲ್ಲಿ ಪಟ್ಟಾದಾರ ಮತ್ತು ಬರಗದಾರರಿಗಾಗಿ ಮುಂಗಾರಿ ಮತ್ತು ಹಿಂಗಾರಿ ಬೆಳೆಗಳಿಗಾಗಿ ಸಾಲ ಕೊಡುವ ಕಾರ್ಯಕ್ರಮದಲ್ಲಿ, 59,000; 71,000 ಮತ್ತು 1,75,00 ಜನರು ಒಳಗೊಂಡಿದ್ದರು. 1982 ರ ಮುಂಗಾರಿ ಬೆಳೆಗೆ ಸಹಾಯ ಮಾಡುವಂತೆ, 30,4,5000 ಜನರ ಹೆಸರನ್ನು ಬ್ಯಾಂಕ್ ಮತ್ತು ಸಹಕಾರಿ ಸಂಘ ಬ್ಯಾಂಕ್‌ಗಳಿಗೆ ಪಂಚಾಯತಿಗಳು ಶಿಫಾರಸು ಮಾಡಿವೆ. 1983ರ ಹಿಂಗಾರಿ ಯೋಜನೆಗೆ 4 ಲಕ್ಷ ಜನರ ಗುರಿ ಇಟ್ಟುಕೊಳ್ಳಲಾಗಿದೆ. ಈ ಗುರಿ ಮುಟ್ಟುತ್ತದೆಂದು ಆಶಿಸಲಾಗಿದೆ.

ಮನೆಯಿರುವ ಭೂಮಿ ಗುರುತಿಸುವುದು

ಪಶ್ಚಿಮ ಬಂಗಾಲ ಸರಕಾರ ಕೈಗೊಂಡಿರುವ ಮತ್ತೊಂದು ಮುಖ್ಯ ಕೆಲಸ ಯಾವುದೆಂದರೆ, ಕೃಷಿ ಕಾರ್ಮಿಕರಿಗೆ, ಸಣ್ಣ ಕೈಗಾರಿಕೆದಾರರಿಗೆ, ಮೀನುಗಾರರಿಗೆ ವಾಸಿಸಲು ಭೂಮಿ ಗುರ್ತಿಸುವುದಾಗಿದೆ. 30-4-1983ರ ವರೆಗೆ ಪುನರ್ವಸತಿ ಖಾತೆ ಗ್ರಾಮಾಂತರ ಭೂಹೀನ ಕುಟುಂಬಗಳಿಗಾಗಿ ಒಂದು ಲಕ್ಷ 40 ಸಾವಿರ ವಾಸದ ಭೂಮಿಯನ್ನು ಗುರ್ತಿಸಿದೆ. ಪಶ್ಚಿಮ ಬಂಗಾಲ ಭೂ ಸುಧಾರಣಾ ಕಾಯಿದೆಗನುಸಾರ ಮನೆ ಜಾಗ ಕೊಡಿಸುವ ಕೆಲಸ (ಸೆಟ್ಲ್‌ಮೆಂಟ್) ರಾಜ್ಯಾದ್ಯಂತ ತೀವ್ರಗತಿಯಲ್ಲಿ ನಡೆದಿದೆ. ಶೇ 50 ರಷ್ಟು ಪ್ರದೇಶದಲ್ಲಿ ಭೂಮಿ ಒಡೆತನದ ವರ ಯಾದಿ ಪ್ರಕಟಿಸಲಾಗಿದೆ.

ಜಮೀನುದಾರರಿಗೆ ಪರಿಹಾರ

ಪಶ್ಚಿಮ ಬಂಗಾಲ ಎಸ್ಟೇಟ್ ಎಕ್ವಿಸಿಶನ್ ಕಾಯಿದೆಗನುಸಾರ ಪರಿಹಾರ ನೋಟೀಸ್ ಕೊಡಬೇಕಾಗಿರುವುದು ಬರೇ 344 ಒಪ್ಪಂದಗಳಿಗೆ ಮಾತ್ರ. ಈ ಕಾಯ್ದೆಗನುಸಾರ ಪಶ್ಚಿಮ ಬಂಗಾಲ ಸರಕಾರ ಈಗಾಗಲೇ ಒಟ್ಟು ರೂ. 80 ಕೋಟಿ ಪರಿಹಾರ ಧನ ವಿತರಣೆ ಮಾಡಿದೆ.

ರಾಜ್ಯದ ಭೂ ಸುಧಾರಣೆಯ ಕಾರ್ಯಕ್ರಮದ ಮುಖ್ಯ ಉದ್ದೇಶವೇನೆಂದರೆ, ಗ್ರಾಮಾಂತರ ಪ್ರದೇಶದಲ್ಲಿಯ ಅನಾನುಕೂಲತೆ ಇರುವ ಹಾಗೂ ನಿರಾಧಾರಿಗಳಿಗೆ ಸ್ವಂತ ಬೆಂಬಲಕ್ಕಾಗಿ ಆದಾಯದ ಮೂಲ ಮತ್ತು ಕಾಯಿದೆ ಹಕ್ಕುಗಳನ್ನು ಒದಗಿಸುವುದಾಗಿದೆ. ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜನಾಂಗಗಳೆಲ್ಲ ಈ ವರ್ಗಕ್ಕೆ ಸೇರಿವೆ. ಭೂ ಸುಧಾರಣೆಯಿಂದಾಗಿ ಅತಿ ಹೆಚ್ಚು ಲಾಭ ಪಡೆದವರು ಈ ಎರಡು ಜಾತಿಯ ಜನರು. ರಾಜ್ಯದಲ್ಲಿ ಕೈಗೊಂಡಿರುವ ತರತರದ ಭೂ ಸುಧಾರಣೆ ಕ್ರಮಗಳಿಂದಾಗಿ ಪ್ರತಿ 5 ಜನರ ಪೈಕಿ ಇಬ್ಬರು ಹಿಂದುಳಿದ ಜಾತಿಗೂ ಒಬ್ಬರು ಪರಿಶಿಷ್ಟ ಜನಾಂಗಕ್ಕೂ ಸೇರಿದವರಾಗಿದ್ದಾರೆ.

(ಎಡರಂಗ ಸರಕಾರ ಮತ್ತು ಜನತೆಯ ಮುನ್ನಡೆ ಎಂಬ ಪಶ್ಚಿಮ ಬಂಗಾಲ ಸರಕಾರದ ಪತ್ರಿಕೆಯಿಂದ)

★

ಪಾರ್ಟಿ ರಾಜ್ಯ ಸಮಿತಿಯ ನಿರ್ಣಯಗಳು

ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಮಂಡಳಿ ದಿನಾಂಕ 14 ರಂದು ಸಭೆ ಸೇರಿ ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಿದೆ.

ಕರ್ನಾಟಕ ಸರ್ಕಾರ ಇತ್ತೀಚೆಗೆ ರಚಿಸಿದ ಕೃಷಿ ಬೆಲೆ ಸಲಹಾ ಮಂಡಳಿಯಲ್ಲಿ ಕೇವಲ ಶ್ರೀಮಂತ ರೈತರ ಪ್ರತಿನಿಧಿಗಳನ್ನು ಮತ್ತು ಭೂಮಾಲೀಕರ ಪ್ರತಿನಿಧಿಗಳನ್ನು ಮಾತ್ರ ಸೇರಿಸಿರುವುದನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯು ಖಂಡಿಸುತ್ತದೆ.

65 ವರ್ಷಗಳ ಧೀರ್ಘ ಇತಿಹಾಸವುಳ್ಳ, ಭಾರತದಾದ್ಯಂತ ಅನೇಕ ಸಮರಶೀಲ ಹೋರಾಟಗಳನ್ನು ಸಂಘಟಿಸಿರುವ, ಮೂರು ದಶಕಗಳ ದಿವಂಗತ ಕಾಂ. ಎ. ಕೆ. ಗೋಪಾಲನ್ ಅಧ್ಯಕ್ಷರಾಗಿದ್ದ ನಮ್ಮ ದೇಶದ ರೈತರ ಅತಿ ದೊಡ್ಡ ಸಂಘಟನೆಯಾದ 80 ಲಕ್ಷ ಸದಸ್ಯ ಬಲವುಳ್ಳ, ಅಖಿಲ ಭಾರತ ಕಿಸಾನ್ ಸಭಾಕ್ಕೆ ಸಯೋಜಿತವಾಗಿರುವ ಕರ್ನಾಟಕ ಪ್ರಾಂತ ರೈತ ಸಂಘವನ್ನು ಸರ್ಕಾರ ಈ ಮಂಡಳಿಯನ್ನು ರಚಿಸುವಾಗ ಕೈಬಿಟ್ಟಿದೆ. ಸಂಘಟನೆಯೇ ಇಲ್ಲದೆ ಭಾರತೀಯ ರೈತರ ಒಕ್ಕೂಟದ ಪ್ರತಿನಿಧಿಯನ್ನು ಸೇರಿಸಿರುವುದು ಪರಮಾಶ್ಚರ್ಯ ಎಂದು ಪಕ್ಷ ಅಭಿಪ್ರಾಯ ಪಟ್ಟಿದೆ.

ಕರ್ನಾಟಕ ಪ್ರಾಂತ ರೈತ ಸಂಘವು ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕದಲ್ಲಿ ಅನೇಕ ಹೋರಾಟಗಳನ್ನು ನಡೆಸಿದೆ. ಅಲ್ಲದೆ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಾಗಿ ಮಲಪ್ರಭ ರೈತ ಹೋರಾಟದಲ್ಲಿ ಮತ್ತು ನರಗುಂದದಿಂದ ಬೆಂಗಳೂರಿನವರೆಗೆ ನಡೆದ ಬೃಹತ್ ಜಾಥಾದಲ್ಲಿ ಪ್ರಧಾನ ಪಾತ್ರ ವಹಿಸಿರುವುದಲ್ಲದೆ ಸ್ವತಂತ್ರವಾಗಿ 1980 ರ ಡಿಸೆಂಬರ್‌ನಲ್ಲಿ ರೈತ ಕಾರ್ಮಿಕರ ಬೃಹತ್ ಮೆರವಣಿಗೆಯೊಂದನ್ನು ಮತ್ತು ಇತ್ತೀಚೆಗೆ ರಾಯಚೂರಿನಲ್ಲಿ ರಾಜ್ಯ ಹತ್ತಿ ಬೆಳೆಗಾರರ ಸಮಾವೇಶವೊಂದನ್ನು ನಡೆಸಿದ ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಕೃಷಿ ಬೆಲೆ ಸಲಹಾ ಮಂಡಳಿಯಲ್ಲಿ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸುತ್ತದೆ.

ಕನಿಷ್ಠ ಕೂಲಿ ಪ್ರಕಟಣೆಗಾಗಿ ಒತ್ತಾಯ

ಕನಿಷ್ಟ ಕೂಲಿ ಸಲಹಾ ಸಮಿತಿಯ ಸದಸ್ಯರಾಗಿದ್ದುದರಿಂದ ಪಕ್ಷದ ಶಾಸಕ ಕಾಂ. ಎಸ್. ಸೂರ್ಯನಾರಾಯಣರಾವ್‌ರವರು ಕನಿಷ್ಟ ಕೂಲಿ ಶೀಘ್ರ ಪ್ರಕಟಣೆಯನ್ನು ಒತ್ತಾಯಿಸಿ ಉಪವಾಸ ಮಾಡುವ ಅಗತ್ಯವೇ ಇರಲಿಲ್ಲ ಎಂಬ ಅರ್ಥ ಕೊಡುವ ಸುದ್ದಿ ಒಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಕಾನೂನು ಇಲಾಖೆಯ ವರಿಷ್ಠರು ಕನಿಷ್ಠ ಕೂಲಿ ಸಲಹಾ ಸಮಿತಿಯ ಶಿಫಾರಸ್ಸುಗಳಿಗೆ ಅಡ್ಡಗಾಲು ಹಾಕಿ ಹಲವು ಕೈಗಾರಿಕೆಗಳಿಗೆ ಎರಡು ತಿಂಗಳ ಹಿಂದೆಯೇ ಶಿಫಾರಸ್ಸಾದ ಕನಿಷ್ಠ ಕೂಲಿಯ ದರಗಳು ಪ್ರಕಟವಾಗದಿದ್ದ ಹಿನ್ನೆಲೆಯಲ್ಲಿ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ವಿಳಂಬ ಮಾಡದೆ ಗೆಜೆಟಿನಲ್ಲಿ ಪ್ರಕಟಿಸಬೇಕೆಂದು ಅವರು ಉಪವಾಸ ಸತ್ಯಾಗ್ರಹ ಕೈಗೊಂಡದ್ದು ಸೂಕ್ತ ಹಾಗೂ ಅಗತ್ಯವಾಗಿದ್ದಿತು.

ನಮ್ಮ ಸಮಾಜದ ಅತ್ಯಂತ ಶೋಷಿತ ಅಸಂಘಟಿತ 1 ಕೋಟಿ ಜನ ವಿಭಾಗವಾದ ಕೃಷಿ ಕಾರ್ಮಿಕರು, ಹೋಟೆಲು ಕಾರ್ಮಿಕರು, ತೋಟಗಾರಿಕೆ, ರೇಷ್ಮೆಯ ವಿವಿಧ ಉದ್ಯಮಗಳು, ಪ್ಲೈವುಡ್, ಅಗರಬತ್ತಿ, ಊದುಬತ್ತಿ, ಸಾರಿಗೆ, ಟೈಲರಿಂಗ್, ಕಾಫಿ, ಟೀ, ರಬ್ಬರ್, ಏಲಕ್ಕಿ, ಪ್ಲಾಂಟೇಷನ್, ಕಾಫಿ ಕ್ಯೂರಿಂಗ್ ಉದ್ಯಮ, ಹತ್ತಿ, ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಉದ್ಯಮ, ಖಂಡಸಾರಿ ಸಕ್ಕರೆ ಉದ್ಯಮ, ಹೆಂಡ ಇಳಿಸುವುದು, ಬಂಡೆ ಒಡೆಯುವುದು, ಜಲ್ಲಿ ಮಾಡುವುದು, ಅಕ್ಕಿ ಮತ್ತು ಹಿಟ್ಟಿನ ಗಿರಣಿಗಳು, ಚಲನಚಿತ್ರ ಉದ್ಯಮ, ಕಟ್ಟಡ, ರಸ್ತೆ ಮಾಡುವುದು ಮುಂತಾದ 26 ಉದ್ಯಮಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಕನಿಷ್ಠ ವೇತನ ಸಲಹಾ ಮಂಡಳಿಯ ಶಿಫಾರಸ್ಸುಗಳನ್ನು ಮತ್ತು ಬೆಲೆ ಸೂಚ್ಯಾಂಕಕ್ಕೆ ಲಗತ್ತಿಸಿದ ತುಟ್ಟಿಭತ್ಯೆಯನ್ನು ಜಾರಿ ಮಾಡುವುದರಲ್ಲಿ ಒಂದು ದಿನ ತಡವಾದರೂ ರಾಜ್ಯದ ಕಾರ್ಮಿಕ ಸಮುದಾಯಕ್ಕೆ ಕೋಟ್ಯಾಂತರ ರೂ.ಗಳು ನಷ್ಟವಾಗುತ್ತದೆ ಮತ್ತು ಬಂಡವಾಳಗಾರರಿಗೆ ಲಾಭವಾಗುತ್ತದೆ. ಕನಿಷ್ಠ ವೇತನ ಸಲಹಾ ಮಂಡಳಿ ತನ್ನ ಶಿಫಾರಸ್ಸುಗಳನ್ನು ಸಲ್ಲಿಸಿ ಅನೇಕ ದಿನಗಳಾದರೂ ಅದನ್ನು ಗೆಜೆಟ್‌ನಲ್ಲಿ ಪ್ರಕಟಿಸದ ಸರ್ಕಾರದ ವಿಳಂಬ ನೀತಿಯನ್ನು ಕಾರ್ಯದರ್ಶಿ ಮಂಡಳಿಯು ಖಂಡಿಸುತ್ತದೆ.

ಈಗಾಗಲೇ ಸಿದ್ಧವಾಗಿರುವ 16 ಉದ್ಯಮಗಳ ಕಾರ್ಮಿಕರ ಕನಿಷ್ಠ ಕೂಲಿಯ ದರಗಳನ್ನು ಕೂಡಲೇ ಪ್ರಕಟಿಸಿ, ಇನ್ನುಳಿದ 10 ಉದ್ಯಮಗಳ ಪರಿಶೀಲನಾ ಕಾರ್ಯವನ್ನು ಶೀಘ್ರವಾಗಿ ಮುಗಿಸಿ ಪ್ರಕಟಿಸಬೇಕೆಂದು ಕಾರ್ಯದರ್ಶಿ ಮಂಡಳಿಯು ಒತ್ತಾಯಿಸುತ್ತದೆ.

ದಿವಂಗತ ಕಾ. ಶ್ರೀನಿವಾಸ ಗುಡಿಯವರಿಗೆ ಸಂತಾಪ

ಏ. 14 ರಂದು ಮರಣಹೊಂದಿದ ಸಿ.ಪಿ.ಐ. ನಾಯಕ ಕಾ. ಶ್ರೀನಿವಾಸ ಗುಡಿಯವರಿಗೆ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ತನ್ನ ಸಂತಾಪವನ್ನು ಸೂಚಿಸುತ್ತದೆ. ಕಾಂ. ಶ್ರೀನಿವಾಸ ಗುಡಿಯವರು ಹೈದರಾಬಾದ್ ವಿಮೋಚನೆಯ ವೀರ ಸಮರದಲ್ಲಿ ಮತ್ತು ನಂತರ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು. ಕಾರ್ಯದರ್ಶಿ ಮಂಡಳಿ ಅವರ ಕುಟುಂಬ ವರ್ಗದವರಿಗೆ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಲೆನಿನ್ ಜನ್ಮ ದಿನದ ಸ್ಮರಣೆ

ಮಾರ್ಕ್ಸ್‌ವಾದಕ್ಕೆ ಲೆನಿನ್‌ರ ಕೊಡುಗೆ

"ಇತಿಹಾಸದಲ್ಲಿ ಬದಲಾವಣೆಯ ಪ್ರತಿಯೊಂದು ಕಾಲಘಟ್ಟದಲ್ಲೂ ಆ ಬದಲಾವಣೆಯೇ ವ್ಯೈಕ್ತಂತಿರುವ ವ್ಯಕ್ತಿಗಳು ಮೂಡಿ ಬರುತ್ತಾರೆ. ತನ್ನ ದಾರಿಯನ್ನು ತಾನೇ ನಿರ್ಮಿಸಿಕೊಂಡು, ತನ್ನ ಅಸ್ತಿತ್ವದ ಹಕ್ಕನ್ನು ಸಾಧಿಸಲು ಮುನ್ನುಗ್ಗುತ್ತಿರುವ ಆ ಬದಲಾವಣೆಯ ಹೊಸತಾದ, ಉನ್ನತವಾದ ಮತ್ತು ಭವಿಷ್ಯಕ್ಕೆ ಸೇರಿದ ಪ್ರತಿಯೊಂದು ಅಂಶವೂ ಈ ವ್ಯಕ್ತಿಗಳಲ್ಲಿ ಸಾಕಾರಗೊಂಡಿರುತ್ತದೆ. ನಮ್ಮ ಯುಗದಲ್ಲಿ, ಬಂಡವಾಳಶಾಹಿಯಿಂದ ಸಮಾಜವಾದದೆಡೆಗೆ ಪರಿವರ್ತನೆಯ ಪ್ರಸ್ತುತ ಯುಗದಲ್ಲಿ ವ್ಲಾದಿಮಿರ್ ಇಲಿಚ್ ಲೆನಿನ್ ಅಂತಹ ಒಬ್ಬ ವ್ಯಕ್ತಿ" ಎಂದಿದ್ದಾರೆ ಒಬ್ಬರು ಲೇಖಕರು.

ಈ ಮಹಾನ್ ಕ್ರಾಂತಿಕಾರಿಯ ಜನ್ಮದಿನದ (ಏಪ್ರಿಲ್ 22, 1870) ಸಂದರ್ಭದಲ್ಲಿ, ಅವರ ನಂತರ ಜಗತ್ತಿನ ಪ್ರಪ್ರಥಮ ಸಮಾಜವಾದೀ ದೇಶದ ಹಾಗೂ ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ನೇತೃತ್ವ ವಹಿಸಿದ ಜೆ. ವಿ. ಸ್ಟಾಲಿನ್‌ರ ಈ ಲೇಖನವನ್ನು ಪ್ರಕಟಿಸುತ್ತಿದ್ದೇವೆ. ವಾಸ್ತವವಾಗಿ ಇದು ಲೇಖನವಲ್ಲ. ಸೋವಿಯಟ್ ಸಂಘಕ್ಕೆ ಭೇಟಿ ನೀಡಿದ್ದ ಪ್ರಥಮ ಅಮೆರಿಕನ್ ಕಾರ್ಮಿಕ ಪ್ರತಿನಿಧಿ ಮಂಡಲದ ಸದಸ್ಯರು 1927 ರ ಸಪ್ಟೆಂಬರ್ 9 ರಂದು ಕಾಮ್ರೇಡ್ ಸ್ಟಾಲಿನ್‌ರೊಡನೆ ನಡೆಸಿದ ಸಂದರ್ಶನದಲ್ಲಿ ಕೇಳಿದ ಈ ಕೆಳಗಿನ ಪ್ರಶ್ನೆಗೆ ಸ್ಟಾಲಿನ್ ನೀಡಿದ ಉತ್ತರವಿದು.

"ಲೆನಿನ್ ಹಾಗೂ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದದ ಆಚರಣೆಗೆ ಸೇರಿಸಿದ ಹೊಸ ತತ್ತ್ವಗಳೇನು ?"

ಲೆನಿನ್‌ರು ಮಾರ್ಕ್ಸ್‌ವಾದಕ್ಕೆ ಯಾವುದೇ "ಹೊಸ ತತ್ತ್ವ"ವನ್ನು ಸೇರಿಸಲಿಲ್ಲ, ಅಥವಾ ಯಾವುದೇ "ಹಳೆಯ" ತತ್ತ್ವಗಳನ್ನು ರದ್ದುಮಾಡಲಿಲ್ಲ ಎಂದು ನಾನು ಭಾವಿಸುತ್ತೇನೆ. ಲೆನಿನ್ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಅತ್ಯಂತ ನಿಷ್ಠ ಹಾಗೂ ಸ್ಥಿರದೃಷ್ಟಿಯ ಶಿಷ್ಯರಾಗಿದ್ದರು, ಈಗಲೂ ಹಾಗೆಯೇ ಉಳಿದಿದ್ದಾರೆ, ಮಾರ್ಕ್ಸ್‌ವಾದದ ಮೂಲ ತತ್ತ್ವಗಳೇ ಅವರ ಎಲ್ಲಾ ಕೃತಿಗಳ ಸಂಪೂರ್ಣ ಹಾಗೂ ಸಮಗ್ರ ಆಧಾರ.

ಆದರೆ ಲೆನಿನ್ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಬೋಧೆಯನ್ನು ಪಾಲಿಸಿದರು ಮಾತ್ರವಲ್ಲ. ಅದನ್ನು ಅಭಿವೃದ್ಧಿಗೊಳಿಸಿದರು ಕೂಡಾ.

ಇದರರ್ಥವೇನು ?

ಅದರ ಅರ್ಥವಿಷ್ಟೇ. ಬೆಳವಣಿಗೆಯ ಹೊಸ ಪರಿಸ್ಥಿತಿಗಳಿಗನುಗುಣವಾಗಿ, ಬಂಡವಾಳಶಾಹಿಯ ಹೊಸ ಮಜಲಿನ, ಅಂದರೆ ಸಾಮ್ರಾಜ್ಯಶಾಹಿಯ ಸನ್ನಿವೇಶಗಳಿಗನುಗುಣವಾಗಿ ಅವರು ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಬೋಧೆಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿದರು. ಅರ್ಥಾತ್, ವರ್ಗ ಸಂಘರ್ಷದ ಹೊಸ ಸನ್ನಿವೇಶದಲ್ಲಿ ಮಾರ್ಕ್ಸ್‌ರ ಬೋಧೆಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸುವಲ್ಲಿ ಮಾರ್ಕ್ಸ್‌ವಾದದ ಭಂಡಾರಕ್ಕೆ ಕೆಲವು ಹೊಸ ಕೊಡುಗೆಗಳನ್ನು — ಮಾರ್ಕ್ಸ್ ಮತ್ತು ಎಂಗೆಲ್ಸ್ ಏನನ್ನು ಸೃಷ್ಟಿಸಿದರೋ, ಬಂಡವಾಳ ಶಾಹಿಯ ಸಾಮ್ರಾಜ್ಯಶಾಹೀ ಪೂರ್ವ ಅವಧಿಯಲ್ಲಿ ಏನನ್ನು ಸೃಷ್ಟಿಸುವುದು ಸಾಧ್ಯವಿತ್ತೋ ಅದಕ್ಕೆ ಹೋಲಿಸಿದಾಗ ಹೊಸದಾದ ಅಂಶಗಳನ್ನು - ನೀಡಿದರು. ಆದರೆ ಅದೇ ಹೊತ್ತಿಗೆ ಮಾರ್ಕ್ಸ್‌ವಾದದ ಭಂಡಾರಕ್ಕೆ ಲೆನಿನ್ನರ ಹೊಸ ಕೊಡುಗೆ ಸಂಪೂರ್ಣವಾಗಿ ಮತ್ತು ಸಮಗ್ರವಾಗಿ ಮಾರ್ಕ್ಸ್ ಮತ್ತು ಎಂಗೆಲ್ಸರು ಹಾಕಿಕೊಟ್ಟ ಮೂಲ ತತ್ತ್ವಗಳನ್ನೇ ಆಧರಿಸಿತ್ತು.

ಈ ಅರ್ಥದಲ್ಲೇ ಲೆನಿನ್‌ವಾದ ಸಾಮ್ರಾಜ್ಯ ಶಾಹಿಯ ಹಾಗೂ ಕಾರ್ಮಿಕ ವರ್ಗದ ಕ್ರಾಂತಿಗಳ ಯುಗದ ಮಾರ್ಕ್ಸ್‌ವಾದ ಎಂದು ನಾವನ್ನುವುದು.

ಲೆನಿನ್ನರು ಈ ರೀತಿ ಹೊಸ ಅಂಶಗಳನ್ನು ಸೇರಿಸಿ ಮಾರ್ಕ್ಸ್‌ರ ಬೋಧೆಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿದ ಕೆಲವು ಉದಾಹರಣೆಗಳನ್ನು ಪರಿಶೀಲಿಸೋಣ.

ಸಾಮ್ರಾಜ್ಯಶಾಹೀ ಮಜಲು

ಮೊದಲನೆಯದಾಗಿ, ಬಂಡವಾಳ ಶಾಹಿಯ ಹೊಸ ಘಟ್ಟವಾದ ಗುತ್ತೇದಾರಿ ಬಂಡವಾಳಶಾಹಿಯ, ಸಾಮ್ರಾಜ್ಯ ಶಾಹಿಯ ಪ್ರಶ್ನೆ.

"ಕ್ಯಾಪಿಟಲ್" ನಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಬಂಡವಾಳ ಶಾಹಿಯ ಅಡಿಪಾಯಗಳ ವಿಶ್ಲೇಷಣೆ ನಡೆಸಿದರು. ಆದರೆ ಅವರು ಜೀವಿಸಿದ್ದು ಗುತ್ತೇದಾರಿ-ಪೂರ್ವ ಬಂಡವಾಳ ಶಾಹಿಯ ಪ್ರಾಬಲ್ಯದ ಕಾಲದಲ್ಲಿ, ಬಂಡವಾಳ ಶಾಹಿ ಸರಾಗವಾಗಿ ವಿಕಾಸ ಹೊಂದಿ ಜಗತ್ತಿನಾದ್ಯಂತ "ಶಾಂತಿಯುತ" ವಾಗಿ ಪಸರಿಸುತ್ತಿದ್ದ ಕಾಲದಲ್ಲಿ.

ಹತ್ತೊಂಭತ್ತನೇ ಶತಮಾನದ ಅಂತ್ಯ ಹಾಗೂ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಬಂಡವಾಳಶಾಹಿಯ ಈ ಮಜಲು ಕೊನೆಗೊಂಡಿತು. ಆ ಹೊತ್ತಿಗಾಗಲೇ ಮಾರ್ಕ್ಸ್ ಮತ್ತು ಎಂಗೆಲ್ಸ್ ಮರಣ ಹೊಂದಿದ್ದರು. ಬಂಡವಾಳ ಶಾಹಿಯ ಸುಗಮ ವಿಕಾಸದ ಸ್ಥಾನದಲ್ಲಿ ಅದರ ಹುಚ್ಚುಚ್ಚಾದ, ವಿಪ್ಲವಕಾರೀಯಾದ ಬೆಳವಣಿಗೆ ಆರಂಭವಾದಾಗ, ಬಂಡವಾಳಶಾಹಿಯ ಅಸಮಾನ ಬೆಳವಣಿಗೆ ಮತ್ತು ಅದರ ವೈರುಧ್ಯದ ಲಕ್ಷಣಗಳು ಎದ್ದು ಕಾಣಲಾರಂಭಿಸಿದಾಗ, ಈ ಅಸಮಾನ ಬೆಳವಣಿಗೆಯಿಂದಾಗಿ ಮಾರುಕಟ್ಟೆಗಳಿಗಾಗಿ ಮತ್ತು ರಫ್ತು ಕ್ಷೇತ್ರಗಳಿಗಾಗಿ ನಡೆದ ಹೋರಾಟ ಆಗಾಗ ಜಗತ್ತನ್ನು ಪುನರ್ವಿಂಗಡಿಸಲು, ಪ್ರಭಾವಿ ವಲಯಗಳನ್ನು ನಿರ್ಮಿಸಿಕೊಳ್ಳಲು ಸಾಮ್ರಾಜ್ಯ ಶಾಹೀ ಯುದ್ಧಗಳು ಅನಿವಾರ್ಯವೆಂದಾದಾಗ ಬಂಡವಾಳ ಶಾಹಿಯ ಆ ಹಳೆಯ ಮಜಲು ಮುಗಿದು ಹೊಸಘಟ್ಟ ಮೂಡಿಬಂತು. ಬಂಡವಾಳ ಶಾಹಿಯ ಈ ಹೊಸ ಘಟ್ಟದ ಪರಿಸ್ಥಿತಿಗಳನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್ ಕೇವಲ ಊಹಿಸಿಕೊಳ್ಳಲು ಮಾತ್ರ ಸಾಧ್ಯವಿತ್ತು.

ಇಲ್ಲಿ ಲೆನಿನ್ ಸಲ್ಲಿಸಿದ ಸೇವೆ, ತತ್ಪರಿಣಾಮವಾಗಿ ಅವರು ನೀಡಿದ ಹೊಸ ಕಾಣಿಕೆಯೆಂದರೆ "ಕ್ಯಾಪಿಟಲ್"ನ ಮೂಲ ಭೂತ ತತ್ತ್ವಗಳ ಆಧಾರದ ಮೇಲೆ ನೀಡಿದ ಬಂಡವಾಳ ಶಾಹಿಯ ಅಂತಿಮ ಘಟ್ಟವಾದ ಸಾಮ್ರಾಜ್ಯ ಶಾಹಿಯ ಸಾಧಾರ ಮಾರ್ಕ್ಸ್‌ವಾದೀ ವಿಶ್ಲೇಷಣೆ ನೀಡಿದ್ದು ಮತ್ತು ಸಾಮ್ರಾಜ್ಯಶಾಹಿಯ ಹುಣ್ಣುಗಳನ್ನು ಹಾಗೂ ಅದರ ಅನಿವಾರ್ಯ ಅಂತ್ಯದ ಪರಿಸ್ಥಿತಿಗಳನ್ನು ಬಯಲು ಮಾಡಿದ್ದು, ಈ ವಿಶ್ಲೇಷಣೆಯೇ ಸಾಮ್ರಾಜ್ಯಶಾಹೀ ಸನ್ನಿವೇಶದಲ್ಲಿ ಒಂದೊಂದೇ ಬಂಡವಾಳ ಶಾಹೀ ದೇಶಗಳಲ್ಲಿ ಪ್ರತ್ಯೇಕವಾಗಿ ಸಮಾಜವಾದದ ವಿಜಯ ಸಾಧ್ಯ ಎಂಬ ಲೆನಿನ್‌ರ ಸಿದ್ಧಾಂತಕ್ಕೆ ಆಧಾರವಾಯಿತು.

ಕಾರ್ಮಿಕ ವರ್ಗದ ಸರ್ವಾಧಿಕಾರ

ಎರಡನೇ ಪ್ರಶ್ನೆ, ಕಾರ್ಮಿಕವರ್ಗದ ಸರ್ವಾಧಿಕಾರ.

ಕಾರ್ಮಿಕ ವರ್ಗದ ರಾಜಕೀಯ ಆಳ್ವಿಕೆಯ ರೂಪದಲ್ಲಿ ಮತ್ತು ಬಲ ಪ್ರಯೋಗದ ಮೂಲಕ ಬಂಡವಾಳದ ಅಧಿಕಾರವನ್ನು ಕಿತ್ತೊಗೆಯುವ ಒಂದು ವಿಧಾನದ ರೂಪದಲ್ಲಿ ಕಾರ್ಮಿಕ ವರ್ಗದ ಸರ್ವಾಧಿಕಾರದ ಮೂಲಭೂತ ವಿಚಾರವನ್ನು ಪ್ರತಿಪಾದಿಸಿದವರು ಮಾರ್ಕ್ಸ್ ಮತ್ತು ಎಂಗೆಲ್ಸ್.

ಈ ಕ್ಷೇತ್ರದಲ್ಲಿ ಲೆನಿನ್ನರ ಹೊಸ ಕಾಣಿಕೆಯೆಂದರೆ–

1. ಸೋವಿಯೆಟ್ ವ್ಯವಸ್ಥೆ ಕಾರ್ಮಿಕವರ್ಗದ ಸರ್ವಾಧಿಕಾರದ ಅತ್ಯುತ್ತಮ ಪ್ರಭುತ್ವ ಸ್ವರೂಪವೆಂಬುದನ್ನು ಅವರು ಕಂಡು ಹಿಡಿದರು ; ಇದರಲ್ಲಿ ಪ್ಯಾರಿಸ್ ಕಮ್ಯೂನಿನ ಹಾಗೂ ರಶಿಯನ್ ಕ್ರಾಂತಿಯ ಅನುಭವಗಳನ್ನು ಅವರು ಬಳಸಿಕೊಂಡರು.

2. ಕಾರ್ಮಿಕ ವರ್ಗದ ಸರ್ವಾಧಿಕಾರವೆಂದರೆ ಮುಂದಾಳುವಾಗಿ ಕಾರ್ಮಿಕ ವರ್ಗದ ಮತ್ತು ಅನುಯಾಯಿಗಳಾಗಿ ಇತರ ವರ್ಗಗಳ (ರೈತಾಪಿ ವರ್ಗದ ಮುಂತಾದ) ಶೋಷಿತ ಜನಗಳ ನಡುವಿನ ವರ್ಗಸಖ್ಯದ ಒಂದು ವಿಶಿಷ್ಟ ಸ್ವರೂಪವೆಂದು ನಿರ್ವಹಿಸುವ ಮೂಲಕ ಕಾರ್ಮಿಕ ವರ್ಗದ ಸರ್ವಾಧಿಕಾರದ ಸೂತ್ರವನ್ನು ಕಾರ್ಮಿಕ ವರ್ಗದ ಮಿತ್ರರ ದೃಷ್ಟಿಕೋನದಿಂದ ವಿಶದಪಡಿಸಿದರು.

3. ಅಲ್ಪಸಂಖ್ಯಾತರ (ಶೋಷಕರ) ಹಿತಾಸಕ್ತಿಗಳನ್ನು ವ್ಯಕ್ತಗೊಳಿಸುವ ಬಂಡವಾಳಶಾಹಿ ಪ್ರಜಾಪ್ರಭುತ್ವಕ್ಕೆ ವ್ಯತಿರಿಕ್ತವಾಗಿ ಬಹುಸಂಖ್ಯಾತರ (ಶೋಷಿತರ) ಹಿತಾಸಕ್ತಿಗಳನ್ನು ವ್ಯಕ್ತಗೊಳಿಸುವ ಕಾರ್ಮಿಕವರ್ಗದ ಪ್ರಜಾಪ್ರಭುತ್ವ ಸ್ವರೂಪವಾದ ಕಾರ್ಮಿಕ ವರ್ಗದ ಸರ್ವಾಧಿಕಾರ ವರ್ಗ ಸಮಾಜದಲ್ಲಿನ ಪ್ರಜಾಪ್ರಭುತ್ವದ ಅತ್ಯುನ್ನತ ಮಾದರಿ ಎಂಬ ವಾಸ್ತವಾಂಶದ ಮೇಲೆ ಅವರು ವಿಶೇಷ ಒತ್ತು ನೀಡಿದರು.

ಸಂಕ್ರಮಣ ಕಾಲದಲ್ಲಿ

ಮೂರನೆಯದಾಗಿ, ಕಾರ್ಮಿಕ ವರ್ಗದ ಸರ್ವಾಧಿಕಾರದ ಅವಧಿಯಲ್ಲಿ ಬಂಡವಾಳ ಶಾಹಿಯಿಂದ ಸಮಾಜವಾದದೆಡೆಗೆ ಪರಿವರ್ತನೆಯ ಸಂಕ್ರಮಣ ಕಾಲದಲ್ಲಿ ಬಂಡವಾಳಶಾಹಿ ಪ್ರಭುತ್ವಗಳಿಂದ ಸುತ್ತುವರಿಯಲ್ಪಟ್ಟ ಒಂದು ದೇಶದಲ್ಲಿ ಯಶಸ್ವಿಯಾಗಿ ಸಮಾಜವಾದವನ್ನು ಕಟ್ಟುವ ವಿಧಾನಗಳ ಮತ್ತು ಸ್ವರೂಪಗಳ ಪ್ರಶ್ನೆ.

ಕಾರ್ಮಿಕ ವರ್ಗದ ಸರ್ವಾಧಿಕಾರದ ಅವಧಿ ಸುಮಾರಾಗಿ ದೀರ್ಘವೇ ಆದ, ಕ್ರಾಂತಿಕಾರೀ ಸಂಘರ್ಷಗಳಿಂದ, ಅಂತರ್ಯುದ್ಧಗಳಿಂದ ಕೂಡಿದ, ಕಾರ್ಮಿಕ ವರ್ಗ ಅಧಿಕಾರದಲ್ಲಿಟ್ಟುಕೊಂಡು ಹಳೆಯ ಬಂಡವಾಳಶಾಹಿ ಸಮಾಜದ ಸ್ಥಾನದಲ್ಲಿ ಒಂದು ಹೊಸ ಸಮಾಜವಾದೀ ಸಮಾಜದ, ವರ್ಗಗಳಿಲ್ಲದ ಮತ್ತು ಪ್ರಭುತ್ವವಿಲ್ಲದ ಸಮಾಜವೊಂದನ್ನು ಸೃಷ್ಟಿಸಲು ಆಗತ್ಯವಾದ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಸಂಘಟನಾತ್ಮಕ ಕ್ರಮಗಳನ್ನು ಕೈಗೊಳ್ಳುವ ಕಾಲಘಟ್ಟವೆಂದು ಮಾರ್ಕ್ಸ್ ಮತ್ತು ಎಂಗೆಲ್ಸ್ ಪರಿಗಣಿಸಿದ್ದರು. ಲೆನಿನ್ನರು ಈ ಮೂಲಭೂತ ತತ್ತ್ವಗಳನ್ನೇ ತಮ್ಮ ಆಧಾರವಾಗಿಸಿಕೊಂಡರು.

ಈ ಕ್ಷೇತ್ರದಲ್ಲಿ ಲೆನಿನ್‌ರ ಹೊಸ ಕೊಡುಗೆಗಳೆಂದರೆ–

1. ಸಾಮ್ರಾಜ್ಯಶಾಹೀ ಪ್ರಭುತ್ವಗಳಿಂದ ಸುತ್ತುವರಿಯಲ್ಪಟ್ಟ ಕಾರ್ಮಿಕ ವರ್ಗದ ಸರ್ವಾಧಿಕಾರದ ನೆಲದಲ್ಲಿ ಒಂದು ಸಂಪೂರ್ಣವಾದ ಸಮಾಜವಾದೀ ಸಮಾಜವನ್ನು ಕಟ್ಟುವುದು ಸಾಧ್ಯ - ಇದಕ್ಕೆ ಒಂದೇ ಶರತ್ತೆಂದರೆ ಸುತ್ತುವರಿದ ಬಂಡವಾಳಶಾಹೀ ದೇಶಗಳು ಸೈನಿಕ ಹಸ್ತಕ್ಷೇಪ ನಡೆಸಿ ಆ ದೇಶದ ಕತ್ತು ಹಿಸುಕಬಾರದು ಎಂಬುದನ್ನು ಅವರು ಸಾಧಿಸಿ ತೋರಿಸಿದರು.

2. ಆರ್ಥಿಕ ವ್ಯವಸ್ಥೆಯ ಆಯಕಟ್ಟಿನ ಸ್ಥಾನಗಳನ್ನು (ಕೈಗಾರಿಕೆ, ಭೂಮಿ, ಸಾರಿಗೆ, ಬ್ಯಾಂಕುಗಳು ಮುಂತಾದ) ಅಧೀನಗೊಳಿಸಿಕೊಂಡ ಕಾರ್ಮಿಕವರ್ಗ ಸಮಾಜೀಕೃತ ಕೈಗಾರಿಕೆಯನ್ನು ಕೃಷಿಯೊಂದಿಗೆ ಜೋಡಿಸಲು ("ಕೈಗಾರಿಕೆ ಮತ್ತು ರೈತಾಪಿ ಆರ್ಥಿಕ ವ್ಯವಸ್ಥೆಯ ನಡುವಣ ಕೊಂಡಿ") ಅನುವು ಮಾಡಿಕೊಡುವ, ತನ್ಮೂಲಕ ಸಮಸ್ತ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ಸಮಾಜವಾದದೆಡೆಗೆ ಒಯ್ಯಲು ಅನುವು ಮಾಡಿಕೊಡುವ ಆರ್ಥಿಕ ಧೋರಣೆಯ ಮೂರ್ತ ರೂಪರೇಷೆಗಳನ್ನು ("ಹೊಸ ಆರ್ಥಿಕ ಧೋರಣೆ" — NEP) ರೂಪಿಸಿದರು.

3. ರೈತಾಪಿ ವರ್ಗದ ಪ್ರಮುಖ ಜನ ವಿಭಾಗವನ್ನು ಸಹಕಾರಿ ಕೃಷಿ ಮೂಲಕ ಸಮಾಜವಾದಿ ರಚನೆಯ ಮಾರ್ಗದೆಡೆಗೆ ಕ್ರಮೇಣ ಮಾರ್ಗದರ್ಶನ ನೀಡುವ, ಅಪರತ್ರ ಸೆಳೆಯುವ ಮೂರ್ತ ವಿಧಾನಗಳನ್ನು ರೂಪಿಸಿದರು. ಇದು ಕಾರ್ಮಿಕವರ್ಗದ ಸರ್ವಾಧಿಕಾರದ ಕೈಗಳಲ್ಲಿ ಸಣ್ಣ ರೈತಾಪಿ ಅರ್ಥ

ವ್ಯವಸ್ಥೆಯಲ್ಲಿ ಪರಿವರ್ತನೆ ತರುವಲ್ಲಿ ಹಾಗೂ ರೈತಾಪಿ ವರ್ಗದ ಪ್ರಮುಖ ವಿಭಾಗಕ್ಕೆ ಸಮಾಜವಾದದ ಭಾವನೆಯಲ್ಲಿ ಪುನರ್ಶಿಕ್ಷಣ ನೀಡುವಲ್ಲಿ ಒಂದು ಅತ್ಯಂತ ಶಕ್ತಿಶಾಲಿ ಸಾಧನ.

ಕಾರ್ಮಿಕ ವರ್ಗದ ಅಧಿನಾಯಕತ್ವ

ನಾಲ್ಕನೆಯದಾಗಿ, ಪ್ರತಿಯೊಂದು ಜನಪ್ರಿಯ ಕ್ರಾಂತಿಯಲ್ಲೂ ಕಾರ್ಮಿಕ ವರ್ಗದ ಅಧಿನಾಯಕತ್ವ (Hegemony)ದ ಪ್ರಶ್ನೆ–ಜಾರ್ ಶಾಹಿಯ ವಿರುದ್ಧ ಕ್ರಾಂತಿಯಲ್ಲೂ, ಬಂಡವಾಳ ಶಾಹಿಯ ವಿರುದ್ಧ ಕ್ರಾಂತಿಯಲ್ಲೂ.

ಮಾರ್ಕ್ಸ್ ಮತ್ತು ಎಂಗೆಲ್ಸ್ ಕಾರ್ಮಿಕ ವರ್ಗದ ಅಧಿನಾಯಕತ್ವದ ಪ್ರಮುಖ ರೂಪ ರೇಷೆಗಳನ್ನು ಪ್ರಸ್ತುತ ಪಡಿಸಿದರು. ಈ ಕ್ಷೇತ್ರದಲ್ಲಿ ಲೆನಿನ್‌ರ ಕೊಡುಗೆಯೆಂದರೆ ಅವರು ಈ ರೂಪ ರೇಷೆಗಳನ್ನು ಮತ್ತಷ್ಟು ಬೆಳೆಸಿ, ವಿಸ್ತರಿಸಿ ಜಾರ್‌ಶಾಹಿ ಮತ್ತು ಬಂಡವಾಳ ಶಾಹಿಯನ್ನು ಕಿತ್ತೊಗೆಯುವಲ್ಲಿ ಮಾತ್ರವಲ್ಲ, ಕಾರ್ಮಿಕರ ಸರ್ವಾಧಿಕಾರದಡಿಯಲ್ಲಿ ಸಮಾಜವಾದವನ್ನು ಕಟ್ಟುವಲ್ಲಿ ಕೂಡಾ ಕಾರ್ಮಿಕ ವರ್ಗದ ಅಧಿನಾಯಕತ್ವದ ಒಂದು ಸಮರಸ ಪೂರ್ಣ ವ್ಯವಸ್ಥೆಯಾಗಿ, ಪೇಟೆ, ಗ್ರಾಮಗಳಲ್ಲಿ ದುಡಿಯುವ ಜನತೆಯ ಕಾರ್ಮಿಕ ವರ್ಗದ ಮುಂದಾಳುತ್ವದ ಒಂದು ಸಮರಸ ಪೂರ್ಣ ವ್ಯವಸ್ಥೆಯಾಗಿ ರೂಪಿಸಿದರು.

ಲೆನಿನ್ ಮತ್ತು ಆತನ ಪಾರ್ಟಿಯಿಂದಾಗಿ ಕಾರ್ಮಿಕ ವರ್ಗದ ಅಧಿನಾಯಕತ್ವದ ಪರಿಕಲ್ಪನೆಯನ್ನು ರಶ್ಯಾದಲ್ಲಿ ಅತ್ಯಂತ ನಿಪುಣತೆಯಿಂದ ಕಾರ್ಯಗತಗೊಳಿಸಲಾಯಿತು ಎಂಬುದು ನಮಗೆ ತಿಳಿದಿದೆ. ರಶ್ಯಾದಲ್ಲಿನ ಕ್ರಾಂತಿ ಏಕೆ ಕಾರ್ಮಿಕ ವರ್ಗವನ್ನು ಅಧಿಕಾರಕ್ಕೆ ತಂದಿತು ಎಂಬುದಕ್ಕೆ ಇಲ್ಲೇ ವಿವರಣೆ ಸಿಗುತ್ತದೆ.

ಈ ಹಿಂದೆ ಘಟನಾವಳಿ ಸಂಭವಿಸುತ್ತಿದ್ದ ಬಗೆಯಿದು. ಕ್ರಾಂತಿಯ ಸಮಯದಲ್ಲಿ ಅಡ್ಡಗಟ್ಟುಗಳಲ್ಲಿ, ಬ್ಯಾರಿಕೇಡ್‌ಗಳಲ್ಲಿ ಹೋರಾಡುವವರು ಕಾರ್ಮಿಕರು, ತಮ್ಮ ರಕ್ತ ಹರಿಸಿ ಹಳೆಯ ವ್ಯವಸ್ಥೆಯನ್ನು ಕಿತ್ತೆಸೆಯುವವರು ಅವರು, ಆದರೆ ಅಧಿಕಾರ ಬೂರ್ಜ್ವಾಗಳ ಪಾಲಾಗುತ್ತದೆ. ಈ ಬೂರ್ಜ್ವಾಗಳೇ ಆ ಮೇಲೆ ಕಾರ್ಮಿಕರ ದಮನ ನಡೆಸುತ್ತಾರೆ, ಶೋಷಿಸುತ್ತಾರೆ. ಇಂಗ್ಲೆಂಡ್ ಹಾಗೂ ಫ್ರಾನ್ಸಿನಲ್ಲಿ ಇದೇ ನಡೆದದ್ದು. ಜರ್ಮನಿಯಲ್ಲೂ ಹಾಗೇ ಆಯಿತು. ಆದರೆ, ಇಲ್ಲಿ, ರಶ್ಯಾದಲ್ಲಿ ಇದು ಬೇರೆ ತಿರುವನ್ನೇ ಪಡೆಯಿತು. ರಶ್ಯಾದಲ್ಲಿ ಕಾರ್ಮಿಕರು ಕ್ರಾಂತಿ ಕಾಲದಲ್ಲಿ ಆಘಾತ ಒಡ್ಡುವ ಶಕ್ತಿಯಾಗಿದ್ದರು. ಇಷ್ಟು ಮಾತ್ರವೇ ಅಲ್ಲ, ಜತೆಗೆ ರಶ್ಯಾದ ಕಾರ್ಮಿಕ ವರ್ಗ ಅಧಿನಾಯಕತ್ವವಾಗಿ, ಹಳ್ಳಿ, ಪಟ್ಟಣಗಳಲ್ಲಿ ಸಮಸ್ತ ಶೋಷಿತ ಜನ ಸಮೂಹಗಳ ರಾಜಕೀಯ ನಾಯಕತ್ವ ವಹಿಸಲೂ ಪ್ರಯತ್ನಿಸಿತು, ಆ ಜನಸಮೂಹಗಳ ಬೆಂಬಲಗಳಿಸಿ, ನಾಯಕತ್ವವನ್ನು ಬೂರ್ಜ್ವಾಗಳಿಂದ ಕಸಿದುಕೊಂಡು, ರಾಜಕೀಯವಾಗಿ ಬೂರ್ಜ್ವಾ ವರ್ಗವನ್ನು ದೂರವಿಟ್ಟಿತು. ಮತ್ತು ಶೋಷಿತ ಜನಸಮೂಹಗಳ ಮುಂದಾಳುವಾಗಿ ರಶ್ಯನ್ ಕಾರ್ಮಿಕ ವರ್ಗ ಅಧಿಕಾರವನ್ನು ತನ್ನ ಕೈವಶ ಮಾಡಿಕೊಳ್ಳಲು, ಅದನ್ನು ತನ್ನ ಹಿತಾಸಕ್ತಿಗಳಿಗನುಗುಣವಾಗಿ, ಬೂರ್ಜ್ವಾ ವರ್ಗದ, ಬಂಡವಾಳ ಶಾಹಿಯ ವಿರುದ್ಧ ಬಳಸಲು ಹೋರಾಟ ನಡೆಸಿತು. ಆದ್ದರಿಂದಲೇ 1905 ರ ಅಕ್ಟೋಬರ್‌ನಲ್ಲಾಗಲೀ, 1917 ರ ಫೆಬ್ರವರಿಯಲ್ಲಾಗಲೀ ಕ್ರಾಂತಿ ಬಲಯುತವಾಗಿ ಹೊರಹೊಮ್ಮಿದಾಗಲೆಲ್ಲಾ ಕಾರ್ಮಿಕ ವರ್ಗವನ್ನು ಹತ್ತಿಕಲು ಇರುವ ಹಳೆಯ ಅಧಿಕಾರಯಂತ್ರವಾದ ಬೂರ್ಜ್ವಾ ಪಾರ್ಲಿಮೆಂಟ್‌ಗೆ ಪ್ರತಿಯಾಗಿ ಬೂರ್ಜ್ವಾ ವರ್ಗವನ್ನು ಹತ್ತಿಕುವ ಕಾರ್ಯನಿರ್ವಹಿಸುವ ಹೊಸ ಅಧಿಕಾರಯಂತ್ರದ ಭ್ರೂಣ ರೂಪದಲ್ಲಿ ಕಾರ್ಮಿಕರ ಪ್ರತಿನಿಧಿಗಳ ಸೋವಿಯೆಟ್‌ಗಳು ರಂಗದ ಮೇಲೆ ಬರಲು ಸಾಧ್ಯವಾಯಿತು.

ರಷ್ಯಾದಲ್ಲಿ ಎರಡುಬಾರಿ ಬೂರ್ಜ್ವಾ ವರ್ಗ ಬೂರ್ಜ್ವಾ ಪಾರ್ಲಿಮೆಂಟನ್ನು ಪುನಃಸ್ಥಾಪಿಸಿ ಸೋವಿಯೆಟ್‌ಗಳನ್ನು ಕೊನೆಗೊಳಿಸಲು ಯತ್ನಿಸಿತು–1917 ರ ಸೆಪ್ಟಂಬರ್‌ನಲ್ಲಿ ಪಾರ್ಲಿಮೆಂಟ್ ಪೂರ್ವ ಅವಧಿಯಲ್ಲಿ, ಬೋಲ್ಷೆವಿಕರು ಅಧಿಕಾರ ಕಿತ್ತುಕೊಳ್ಳುವ ಮೊದಲು ಮತ್ತು 1918 ರ ಜನವರಿಯಲ್ಲಿ ಕಾರ್ಮಿಕ ವರ್ಗ ಅಧಿಕಾರ ಕಿತ್ತುಕೊಂಡ ನಂತರ, ಸಂವಿಧಾನ ಸಭೆಯ ಸಮಯದಲ್ಲಿ ಎರಡೂ ಬಾರಿ ಅದು ಸೋತು ಹೋಯಿತು. ಏಕೆ? ಏಕೆಂದರೆ, ಆದಾಗಲೇ ಬೂರ್ಜ್ವಾವರ್ಗ ರಾಜಕೀಯವಾಗಿ ದೂರ ಸರಿಸಲ್ಪಟ್ಟಿತ್ತು, ದುಡಿಯುವ ಅಪಾರ ಜನಸಮೂಹ ಕಾರ್ಮಿಕ ವರ್ಗ ಕ್ರಾಂತಿಯ ಏಕಮಾತ್ರ ಮುಂದಾಳುವೆಂದು ಪರಿಗಣಿಸಿತ್ತು ಮತ್ತು ಆದಾಗಲೇ ಸೋವಿಯೆಟ್‌ಗಳು ಕಾರ್ಮಿಕರ ಸ್ವಂತ ಸರಕಾರವಾಗಿ ಜನಸಮೂಹಗಳ ಪರೀಕ್ಷೆಗೊಳಪಟ್ಟು ಯಶಸ್ವಿಯಾಗಿದ್ದವು. ಅದರ ಬದಲಿಗೆ ಬೂರ್ಜ್ವಾ ಪಾರ್ಲಿಮೆಂಟನ್ನು ಪಡೆಯುವುದು ಕಾರ್ಮಿಕ ವರ್ಗದ ಮಟ್ಟಿಗೆ ಆತ್ಮಹತ್ಯಾಕಾರಿಯಾಗಿತ್ತು. ಆದರಿಂದ ರಶ್ಯಾದಲ್ಲಿ ಬೂರ್ಜ್ವಾ ಪಾರ್ಲಿಮೆಂಟರಿವಾದ ಬೇರು ಬಿಟ್ಟಿರದಿದ್ದರೆ ಅದರಲ್ಲಿ ಆಶ್ಚರ್ಯವೇನು ಇಲ್ಲ. ಆದ್ದರಿಂದಲೇ ರಶ್ಯಾದಲ್ಲಿ ಕ್ರಾಂತಿ ಕಾರ್ಮಿಕ ವರ್ಗದ ಆಳ್ವಿಕೆಗೆ ಮಾರ್ಗ ಕೊಟ್ಟಿತು

ಕ್ರಾಂತಿಯಲ್ಲಿ ಕಾರ್ಮಿಕವರ್ಗದ ಅಧಿನಾಯಕತ್ವದ ಬಗ್ಗೆ ಲೆನಿನ್ ರೂಪಿಸಿದ ವ್ಯವಸ್ಥೆಯನ್ನು ಅನ್ವಯಗೊಳಿಸಿದುದರ ಫಲಿತಾಂಶಗಳೇ ಇವು.

ರಾಷ್ಟ್ರೀಯ ಪ್ರಶ್ನೆ

ಐದನೆಯ ಪ್ರಶ್ನೆಯೆಂದರೆ ರಾಷ್ಟ್ರೀಯ ಮತ್ತು ವಸಾಹತುಶಾಹಿ ಪ್ರಶ್ನೆ.

ಮಾರ್ಕ್ಸ್ ಮತ್ತು ಎಂಗೆಲ್ಸ್ ತಮ್ಮ ಕಾಲದಲ್ಲಿ ಐರ್ಲೆಂಡ್, ಭಾರತ, ಚೀಣಾ, ಮಧ್ಯ ಯುರೋಪಿನ ದೇಶಗಳು, ಪೋಲೆಂಡ್ ಮತ್ತು ಹಂಗೆರಿಯ ಘಟನೆಗಳನ್ನು ವಿಶ್ಲೇಷಿಸಿ ರಾಷ್ಟ್ರೀಯ ಮತ್ತು ವಸಾಹತುಶಾಹಿ ಪ್ರಶ್ನೆಯ ಕುರಿತು ಆರಂಭಿಕ ವಿಚಾರಗಳನ್ನು ಒದಗಿಸಿದ್ದರು. ಲೆನಿನ್ ತಮ್ಮ ಕೃತಿಗಳಲ್ಲಿ ಇವನ್ನು ಆಧಾರವಾಗಿಟ್ಟುಕೊಂಡರು.

ಈ ಕ್ಷೇತ್ರದಲ್ಲಿ ಲೆನಿನ್ನರ ಹೊಸ ಕೊಡುಗೆಗಳೆಂದರೆ–

1. ಈ ವಿಚಾರಗಳನ್ನು ಅವರು ಸಾಮ್ರಾಜ್ಯಶಾಹೀ ಯುಗದಲ್ಲಿ ರಾಷ್ಟ್ರೀಯ ಮತ್ತು ವಸಾಹತುಶಾಹಿ ಕ್ರಾಂತಿಗಳ ಕುರಿತಾದ ದೃಷ್ಟಿಕೋನಗಳ ಒಂದು ಸಮರಸಪೂರ್ಣ ಚೌಕಟ್ಟಿನಲ್ಲಿ ಏಕತ್ರಗೊಳಿಸಿದರು.

2. ರಾಷ್ಟ್ರೀಯ ಹಾಗೂ ವಸಾಹತುಶಾಹೀ ಪ್ರಶ್ನೆಯನ್ನು ಅವರು ಸಾಮ್ರಾಜ್ಯಶಾಹಿಯನ್ನು ಕಿತ್ತೆಸೆಯುವ ಪ್ರಶ್ನೆಯೊಂದಿಗೆ ಜೋಡಿಸಿದರು.

3. ರಾಷ್ಟ್ರೀಯ ಹಾಗೂ ವಸಾಹತುಶಾಹಿ ಪ್ರಶ್ನೆ ಅಂತರ್ರಾಷ್ಟ್ರೀಯ ಕಾರ್ಮಿಕವರ್ಗದ ಕ್ರಾಂತಿಯ ಸಾರ್ವತ್ರಿಕ ಪ್ರಶ್ನೆಯ ಒಂದು ಭಾಗವೆಂದು ಘೋಷಿಸಿದರು.

ಕಾರ್ಮಿಕ ವರ್ಗದ ಪಕ್ಷ

ಕೊನೆಯದಾಗಿ, ಕಾರ್ಮಿಕ ವರ್ಗದ ಪಕ್ಷದ ಪ್ರಶ್ನೆ.

ಮಾರ್ಕ್ಸ್ ಮತ್ತು ಎಂಗೆಲ್ಸ್ ಕಾರ್ಮಿಕ ವರ್ಗದ ಮುಂದಾಳಾಗಿ ಪಕ್ಷದ ಪ್ರಮುಖ ರೂಪರೇಷೆಗಳನ್ನು ನೀಡಿದ್ದರು. ಈ ಪಕ್ಷವಿಲ್ಲದೆ ಕಾರ್ಮಿಕ ವರ್ಗ ತನ್ನ ವಿಮೋಚನೆ ಪಡೆಯುವುದು ಸಾಧ್ಯವಿಲ್ಲ – ಅದು ಅಧಿಕಾರ ಗ್ರಹಣದ ಅರ್ಥದಲ್ಲೇ ಆಗಲಿ ಅಥವಾ ಬಂಡವಾಳಶಾಹೀ ಸಮಾಜವನ್ನು ಪರಿವರ್ತಿಸುವ ಅರ್ಥದಲ್ಲೇ ಆಗಲಿ.

ಸಾಮ್ರಾಜ್ಯಶಾಹೀ ಕಾಲಘಟ್ಟದಲ್ಲಿ ಕಾರ್ಮಿಕವರ್ಗದ ಹೋರಾಟದ ಹೊಸ ಪರಿಸ್ಥಿತಿಗಳಿಗೆ ಅನುಗುಣವಾಗಿ ಈ ರೂಪರೇಷೆಗಳನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿದರೆಂಬುದೇ ಲೆನಿನ್ನರು ಈ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು. ಅವರು (1) ಕಾರ್ಮಿಕವರ್ಗದ ಇತರ ಸಂಘಟನೆ (ಕಾರ್ಮಿಕ ಸಂಘ, ಸಹಕಾರಿ ಸಂಘ, ಪ್ರಭುತ್ವ ಸಂಘಟನೆ)ಗಳಿಗೆ ಹೋಲಿಸಿದರೆ ಪಕ್ಷ ಎಂಬುದು ವರ್ಗ ಸಂಘಟನೆಯ ಅತ್ಯುಚ್ಚ ಸ್ವರೂಪ, ಇತರ ಸಂಘಟನೆಗಳ ಕೆಲಸವನ್ನು ಸಾರ್ವತ್ರೀಕರಿಸಿ ನಿರ್ದೇಶಿಸುವುದು ಪಕ್ಷದ ಕೆಲಸ.

2. ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ಕೇವಲ ಪಕ್ಷದ ಮಾರ್ಗದರ್ಶನದ ಮೂಲಕವಷ್ಟೇ ಜ್ಯಾರಿಗೊಳಿಸಲು ಸಾಧ್ಯ,

3. ಕಾರ್ಮಿಕ ವರ್ಗದ ಸರ್ವಾಧಿಕಾರ ಸಂಪೂರ್ಣಗೊಳ್ಳಬೇಕಾದರೆ ಅದು ಕೇವಲ ಒಂದು ಪಕ್ಷದ, ಕಮ್ಯೂನಿಸ್ಟ್ ಪಕ್ಷದ ನಾಯಕತ್ವದಲ್ಲಿರಬೇಕು.

4. ಪಕ್ಷದಲ್ಲಿ ಕಠಿಣ ಶಿಸ್ತು ಇಲ್ಲದಿದ್ದರೆ ಶೋಷಕರನ್ನು ದಮನ ಮಾಡುವ ಮತ್ತು ವರ್ಗ ಸಮಾಜವನ್ನು ಸಮಾಜವಾದೀ ಸಮಾಜವನ್ನಾಗಿ ಪರಿವರ್ತಿಸುವ ಕಾರ್ಮಿಕ ವರ್ಗದ ಸರ್ವಾಧಿಕಾರದ ಕರ್ತವ್ಯಗಳನ್ನು ನೆರವೇರಿಸುವುದು ಸಾಧ್ಯವಿಲ್ಲ ಎಂದು ಲೆನಿನ್ ತೋರಿಸಿಕೊಟ್ಟರು.

ಸಾಮ್ರಾಜ್ಯಶಾಹೀ ಕಾಲಘಟ್ಟದಲ್ಲಿ ಕಾರ್ಮಿಕ ವರ್ಗದ ಹೋರಾಟದ ಹೊಸ ಪರಿಸ್ಥಿತಿಗಳಿಗೆ ಅನುಗುಣವಾಗಿ ಮಾರ್ಕ್ಸ್‌ರ ಬೋಧೆಗಳಿಗೆ ಮೂರ್ತರೂಪ ಕೊಟ್ಟು ಅವನ್ನು ಮತ್ತಷ್ಟು ಬೆಳೆಸಿದ್ದೇ ಲೆನಿನ್‌ರವರು ತಮ್ಮ ಕೃತಿಗಳ ಮೂಲಕ ಅರ್ಪಿಸಿದ ಹೊಸ ಕೊಡುಗೆ. ಅದರ ಮುಖ್ಯ ಅಂಶಗಳೇ ಇವು.

★

ಕೇಂದ್ರ ನೌಕರರ ಒಕ್ಕೂಟದ ಧರಣಿ ಸತ್ಯಾಗ್ರಹ

ತಾ|| 28-3-1984 ರಂದು ಮೈಸೂರಿನ ಕೇಂದ್ರ ನೌಕರರ ಒಕ್ಕೂಟವು ನೌಕರರಿಗೆ ಸಂದಾಯವಾಗಬೇಕಾಗಿರುವ ಐದು ಕಂತುಗಳ ತುಟ್ಟಿ ಭತ್ಯವನ್ನು ಹಣದ ರೂಪದಲ್ಲಿ ತಕ್ಷಣವೇ ಪಾವತಿ ಮಾಡಬೇಕೆಂದು ಸರಕಾರವನು ಒತ್ತಾಯಿಸಲು ಕೇಂದ್ರೀಯ ತಂತಿ ಕಛೇರಿಯ ಮುಂದೆ ಧರಣಿ ಸತ್ಯಾಗ್ರಹವನ್ನು ನಡೆಸಿತು.

ಈ ಸಭೆಯನ್ನುದ್ದೇಶಿಸಿ ಸಿ. ಐ. ಟಿ. ಯು. ಮೈಸೂರು ಜಿಲ್ಲಾ ಸಮಿತಿಯ ಕೋಶಾಧಿಕಾರಿ ಕಾಂ. ತಿರುಮಲಾಚಾರ್‌ರವರು ಮಾತನಾಡಿದರು, ಜಿ. ಐ. ಸಿ. ಯ ಇತ್ತೀಚಿನ ವೇತನ ಪರಿಷ್ಕರಣದ ಬಗ್ಗೆ ಸುಪ್ರೀಮ್ ಕೋರ್ಟಿನ ತೀರ್ಮಾನವನ್ನು ತಿಳಿಸಿದರು. ಎಲ್ಲಾ ಕೇಂದ್ರ ನೌಕರರು ಐಕ್ಯತೆಯಿಂದ ಹೋರಾಟ ನಡೆಸಬೇಕೆಂದು ಕರೆನೀಡಿದರು.

ಮಹಿಳಾ ಸಂಘಟನೆ - ಸಮಿತಿ ರಚನೆ

ಮಾರ್ಚ್ 25 ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಯಚೂರು ನಗರ ಸಮಿತಿಯ ರಚನೆಯಾಯಿತು. ಅಧ್ಯಕ್ಷರಾಗಿ ಶ್ರೀಮತಿ ಹರಿಣಿ ಕಕ್ಕೇರಿ, ಉಪಾಧ್ಯಕ್ಷರಾಗಿ ಶ್ರೀಮತಿ ಸುಲೋಚನಾ ಮತ್ತು ರಜಿಯಾಬೇಗಂ, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀಮತಿ ಶಾಮಲಾ ಪೂಜಾರ ಮತ್ತು ಕಾರ್ಯದರ್ಶಿಗಳಾಗಿ ಶ್ರೀಮತಿ ಪಾರ್ವತಮ್ಮ, ಲಕ್ಷ್ಮಮ್ಮ, ಬೇಗಂಬಿ, ತುಂಗಾ, ಕೆ. ಸಿ. ಪ್ರಭಾವತಿ ಹೇಮಾದ್ರಿ ಮತ್ತು ಖಜಾಂಜಿಯಾಗಿ ಶ್ರೀಮತಿ ಕಮಲಾ ಬಾಳೆ ಇವರುಗಳು ಸರ್ವಾನುಮತದಿಂದ ಆಯ್ಕೆಯಾದರು. ಇದಲ್ಲದೆ 23 ಜನ ಕಾರ್ಯಕಾರೀ ಸದಸ್ಯರು ಆಯ್ಕೆಯಾದರೆಂದು ಪ್ರಕಟನೆ ತಿಳಿಸಿದೆ.

ನಿರುದ್ಯೋಗ ವಿರೋಧಿ ದಿನಾಚರಣೆ

ಡಿ. ವೈ. ಎಫ್. ಐ.ನ ರಾಜ್ಯ ಸಮಿತಿ ಕರೆಯ ಮೇರೆಗೆ ಧಾರವಾಡದಲ್ಲಿ ತಾ 23·3·84 ರಿಂದ 28·3·84 ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿತ್ತು.

ಕೊನೆಯ ಕಾರ್ಯಕ್ರಮವಾದ ನಿರುದ್ಯೋಗ ವಿರೋಧಿ ದಿನಾಚರಣೆಯ ಅಂಗವಾಗಿ 28·3·84 ರಂದು ಸಾಯಂಕಾಲ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಕೊಡಲಾಯಿತು. ಮನವಿಯಲ್ಲಿ ನಿರುದ್ಯೋಗವನ್ನು ಸೃಷ್ಟಿಸುತ್ತಿರುವ ಕೇಂದ್ರ ಸರಕಾರದ ಧೋರಣೆಯನ್ನು ಖಂಡಿಸಿದ್ದಲ್ಲದೆ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಪ್ರಾರಂಭಿಸಲು ಒತ್ತಾಯಿಸಲಾಗಿದೆ. ಹಾಗೂ ಪಕ್ಷಾಂತರ ಮಾಡುವ ಶಾಸಕರಿಗೆ ಎಚ್ಚರಿಕೆ ಕೊಡಲಾಗಿದೆ.

ನಂತರ ನಡೆದ ಸಭೆಯಲ್ಲಿ ರಾಜ್ಯ ಸಮಿತಿ ಸದಸ್ಯ ಜಿ. ಎನ್. ದೇಶಪಾಂಡೆ ಅವರು ನಿರುದ್ಯೋಗ ವಿರೋಧಿ ದಿನಾಚರಣೆಯ ಬಗ್ಗೆ ವಿವರಿಸಿದರು. ಮತ್ತು ಸಿ. ಐ. ಟಿ. ಯು. ಕಾರ್ಯಕರ್ತರಾದ ಕಲ್ಲಪ್ಪ ಬೆನಕೊಪ್ಪ ಇವರು ಡಿ. ವೈ. ಎಫ್. ಐ. ಹೋರಾಟಗಳಿಗೆ ತಮ್ಮ ಬೆಂಬಲವನ್ನು ಸೂಚಿಸಿದ್ದಲ್ಲದೆ ಕೇಂದ್ರ ಸರಕಾರದ ಧೋರಣೆಯನ್ನು ಖಂಡಿಸಿದರು. ನಂತರ ಪಿ. ಚಂದ್ರಹಾಸ ಅವರು ಡಿ. ವೈ. ಎಫ್. ಐ. ಹೋರಾಟಕ್ಕೆ ಬೆಂಬಲಿಸಿ ಕೇಂದ್ರ ಸರಕಾರದ ಧೋರಣೆಯನ್ನು ಖಂಡಿಸಿದರು. ಕೊನೆಯಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಕೆ. ಬಿ. ಕಟ್ಟಿಯವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ರೈತ ಸಂಘದ ಚಟುವಟಿಕೆಗಳು

ಪ್ರಾಂತ ರೈತ ಸಂಘದ ದ. ಕ. ಜಿಲ್ಲಾ ಸಮಿತಿ ಸಭೆ

ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಸಭೆಯು ಏಪ್ರಿಲ್ 10 ರಂದು ಮಂಗಳೂರಿನಲ್ಲಿ ನಡೆದು ತಿಂಗಳ ಕೊನೆಯೊಳಗೆ ಜಿಲ್ಲೆಯಲ್ಲಿ ಇಪ್ಪತ್ತು ಸಹಸ್ರ ಸದಸ್ಯರನ್ನು ಸೇರಿಸುವ ಕೆಲಸವನ್ನು ಯಶಸ್ವಿಯಾಗಿ ಮುಗಿಸಲು ತೀರ್ಮಾನಿಸಲಾಯ್ತು. ಜಿಲ್ಲಾ ಸಮಿತಿಯ ಅಧ್ಯಕ್ಷ ಕಾ. ಅಬ್ರಹಾಂ ಕರ್ಕಡ ಅವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯ ಪ್ರಾರಂಭದಲ್ಲಿ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾ. ಜನಾರ್ಧನ ನಾಯಕ್ ಅವರು ಕಳೆದ ಬಾರಿ ಸಭೆ ಸೇರಿದ ನಂತರದ ಚಟುವಟಿಕೆಗಳ ಬಗ್ಗೆ ವರದಿ ಇತ್ತರು. ಅಖಿಲ ಭಾರತ ಕಿಸಾನ್ ಸಭಾದ ಕಾರ್ಯಕಾರಿ ಮಂಡಳಿ ಮತ್ತು ಅಖಿಲ ಭಾರತ ಕೃಷಿ ಕಾರ್ಮಿಕ ಸಂಘದ ಕಾರ್ಯಕಾರಿ ಸಮಿತಿ ಸಭೆಗಳ ತೀರ್ಮಾನಗಳ ಬಗ್ಗೆಯೂ, ಮಾರ್ಚ್ 24 ಮತ್ತು 25 ರಂದು ಬೆಂಗಳೂರಿನಲ್ಲಿ ಸೇರಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ನಿರ್ಣಯಗಳ ಬಗ್ಗೆಯೂ ಕಾಮ್ರೇಡ್ ಎಂ. ಕೆ. ಭಟ್ ಅವರು ಸವಿವರವಾದ ವರದಿ ಇತ್ತರು. ರೈತ ಸಂಘಟನೆ ಮತ್ತು ಕೃಷಿ ಕೂಲಿಗಾರ ಸಂಘಟನೆಗಳನ್ನು ಅತೀ ಪ್ರಾಮುಖ್ಯವಾಗಿ ಪರಿಗಣಿಸಿ ಅವನ್ನು ಪ್ರಬಲ ಸಂಘಟನೆಗಳನ್ನಾಗಿ ಬೆಳೆಸಬೇಕೆಂದ ಎಂ. ಕೆ. ಅವರು ರೈತ ಸಂಘಟನೆಯನ್ನು ಚುರುಕುಗೊಳಿಸಿ ದೊಡ್ಡ ಸಂಖ್ಯೆಯಲ್ಲಿ ಸದಸ್ಯತ್ವ ಸೇರಿಸಲು ಕರೆ ಇತ್ತರು. ಸಭೆಯಲ್ಲಿ ಉಪಸ್ಥಿತರಿದ್ದ ಕೆ. ಆರ್. ಶ್ರೀಯಾನ್ ಅವರು ಹೋರಾಟ ಮತ್ತು ಚಳುವಳಿಗಳೊಂದಿಗೆ ಪ್ರಭಾವವನ್ನು ಹೆಚ್ಚಿಸಿದರೆ ಸಾಲದು, ಅದನ್ನು ಸದಸ್ಯತ್ವ ಸೇರಿಸುವುದರ ಮೂಲಕ ಸಂಘಟನಾ ಶಕ್ತಿಯನ್ನಾಗಿ ಮಾರ್ಪಡಿಸುವುದು ಅವಶ್ಯ ಎಂದು ಒತ್ತಿಹೇಳಿದರು. ಜಿಲ್ಲಾ ಸಮಿತಿ ಸದಸ್ಯರುಗಳೂ ವರದಿ ಇತ್ತು ಚರ್ಚೆಯಲ್ಲಿ ಭಾಗವಹಿಸಿದರು.

ಈ ಮೊದಲೇ ತೀರ್ಮಾನಿಸಿದ್ದ ಪ್ರಕಾರ ಜಿಲ್ಲೆಯಲ್ಲಿ ಏಪ್ರಿಲ್ ಕೊನೆಯೊಳಗೆ ಇಪ್ಪತ್ತು ಸಹಸ್ರ ಸದಸ್ಯರನ್ನು ಸೇರಿಸಲು, ರಾಜ್ಯದಾದ್ಯಂತ ಮೇ 21 ರಂದು ನಡೆಸಲು ಯೋಚಿಸಿರುವ ಪಿಕೆಟಿಂಗ್ ಕಾರ್ಯಕ್ರಮವನ್ನು ಯಶಸ್ವೀಗೊಳಿಸಲೂ ಸಭೆಯು ತೀರ್ಮಾನಿಸಿತು. ಮೇ ಕೊನೆಯ ಭಾಗದಲ್ಲಿ ನಡೆಯಲಿರುವ ರಾಜ್ಯ ಮಟ್ಟದ ತರಬೇತಿಶಿಬಿರಕ್ಕೆ ಜಿಲ್ಲೆಯಿಂದ ಹದಿನೈದು ಮಂದಿ ಕಾರ್ಯಕರ್ತರನ್ನು ಕಳುಹಿಸಲೂ ನಿರ್ಣಯಿಸಲಾಯಿತು. ಜಿಲ್ಲೆಯ ಕೇಂದ್ರವಾದ ಮಂಗಳೂರಿನಲ್ಲಿ ಸಿ. ಐ. ಟಿ. ಯು. ವಿನ ರಾಜ್ಯ ಸಮ್ಮೇಳನವು ನಡೆಯಲಿರುವುದರ ಬಗ್ಗೆ ಸಂತಸ ವ್ಯಕ್ತಪಡಿಸಿದ ಸಭೆಯು ಕೊನೆಯ ದಿನದ ರ್‍ಯಾಲಿಗೆ ದೊಡ್ಡ ಸಂಖ್ಯೆಯಲ್ಲಿ ಹಳ್ಳಿಯ ಬಡವರನ್ನು, ರೈತರನ್ನೂ ಸಂಘಟಿಸಿ ತರಲೂ, ರೈತ-ಕಾರ್ಮಿಕರ ಸೌಹಾರ್ದತೆಯ ಕುರುಹಾಗಿ ಸಮ್ಮೇಳನಕ್ಕೆ ಹಾಯ ಸಂಗ್ರಹಿಸಿ ಕೊಡಲೂ ತೀರ್ಮಾನಿಸಿತು.

ಸುಳ್ಯ ತಾಲ್ಲೂಕು ಸಮಿತಿ ಸಭೆ

ಕರ್ನಾಟಕ ಪ್ರಾಂತ ರೈತ ಸಂಘದ ದ. ಕ. ಜಿಲ್ಲೆಯ ಸುಳ್ಯ ತಾಲ್ಲೂಕು ಸಮಿತಿಯ ಸಭೆಯು ಏಪ್ರಿಲ್ 11 ರಂದು ಸುಳ್ಯದಲ್ಲಿ ಕಾ. ಸೂರ್ಯನಾರಾಯಣ ಭಟ್ ಅವರ ಅಧ್ಯಕ್ಷತೆಯಲ್ಲಿ ಸೇರಿತು, ತಾಲ್ಲೂಕು ಸಮಿತಿ ಪ್ರಧಾನ ಕಾರ್ಯದರ್ಶಿ ಕಾ. ಮೋನಪ್ಪಗೌಡ ಅವರು ವರದಿಯನ್ನಿತ್ತರು. ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಹಾಗೂ ಜಿಲ್ಲಾ ಸಮಿತಿ ಸಭೆಗಳ ನಿರ್ಣಯಗಳನ್ನು ವಿವರಿಸಿದ ಕಾ. ಎಂ. ಕೆ. ಭಟ್ ಅವರು ಸದಸ್ಯತ್ವ ಸೇರಿಸುವ ಚಳುವಳಿಯನ್ನು ನಡೆಸಿ ಏಪ್ರಿಲ್ ಕೊನೆಯೊಳಗೆ ಸಹಸ್ರಾರು ಸದಸ್ಯರನ್ನು ಮೊಂದಾಯಿಸಲು ಕರೆ ಇತ್ತರು. ಸಮಿತಿ ಸದಸ್ಯರೂ, ಆಮಂತ್ರಿತರೂ ವರದಿ ಇತ್ತು ಚರ್ಚೆ ಮಾಡಿದ ನಂತರ ತಿಂಗಳ ಕೊನೆಯೊಳಗೆ ಮೂರೊವರೆ ಸಹಸ್ರ ಪಪ್ಪಾದರೂ ಸದಸ್ಯರನ್ನು ಸೇರಿಸಲೂ, ನಿಧಿ ಸಂಗ್ರಹಿಸಲೂ ಮತ್ತು ಜಿಲ್ಲಾ ಹಾಗೂ ರಾಜ್ಯ ಸಮಿತಿಗಳ ತೀರ್ಮಾನಗಳನ್ನೆಲ್ಲಾ ಯಶಸ್ವಿಯಾಗಿ ಕಾರ್ಯಗತಗೊಳಿಸಲೂ ತೀರ್ಮಾನಿಸಲಾಯ್ತು.

ಮಂಗಳೂರು ತಾಲ್ಲೂಕು ರೈತ ಸಂಘದ ಸಭೆ

ತಾ. 14-4-84 ರಂದು ಮಂಗಳೂರು ತಾಲ್ಲೂಕು ರೈತ ಸಂಘದ ಸಭೆಯು ಸಂಘದ ಅಧ್ಯಕ್ಷರಾದ ಕಾಮ್ರೇಡ್ ಯು. ಜನಾರ್ಧನ ನಾಯಕರ ಅಧ್ಯಕ್ಷತೆಯಲ್ಲಿ ಸೇರಿತು.

ಪ್ರಾರಂಭದಲ್ಲಿ ಕಾರ್ಯದರ್ಶಿ ಕಾ. ರಾಮಚಂದ್ರ ಉಚ್ಚಿಲ್‌ರವರು ಸಂಘದ ಚಟುವಟಿಕೆಯ ವರದಿಯನ್ನು ವಿವರಿಸಿದರು. ಬಳಿಕ ಚರ್ಚೆ ನಡೆದು ವರದಿಯನ್ನು ಅಂಗೀಕರಿಸಿದ ಬಳಿಕ ಇದೇ ತಿಂಗಳಿನೊಳಗೆ ರೈತ ಸಂಘದ ಸದಸ್ಯರನ್ನು ಮಾಡುವ ಕೆಲಸವನ್ನು ಪೂರ್ತಿಗೊಳಿಸಲು ನಿರ್ಣಯಿಸಲಾಯಿತು.

ಸಭೆಯು ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಿತು.

1. ಮೇ ತಿಂಗಳ ತಾ. 14 ರಿಂದ 4 ದಿನಗಳ ತನಕ ಮಂಗಳೂರಿನಲ್ಲಿ ನಡೆಯುವ ರಾಜ್ಯದ ಸಿಐಟಿಯು ಸಮ್ಮೇಳನವನ್ನು ಯಶಸ್ವಿಗೊಳಿಸಬೇಕೆಂದು ರೈತ-ಕಾರ್ಮಿಕರನ್ನು ವಿನಂತಿಸಲಾಯಿತು.

2. ದರ್ಖಾಸ್ತುದಾರರಿಗೆ ಕೂಡಲೇ ಪಟ್ಟಾವನ್ನು ಕೊಡಲು ಸರಕಾರ ಕ್ರಮ ಕೈಕೊಳ್ಳಬೇಕೆಂದು ಸರಕಾರವನ್ನು ವಿನಂತಿಸಲಾಯಿತು. ರೈತರ ಸ್ವಾಧೀನವಿರುವ ಸರಕಾರೀ ಸ್ಥಳವನ್ನು ಖಾಯಂಗೊಳಿಸಲು ವಿನಂತಿಸಲಾಯಿತು.

ನೆಲಮಂಗಲದಲ್ಲಿ ದಿನಗೂಲಿ ನೌಕರರ ಸಭೆ

ನೆಲಮಂಗಲ ತಾಲ್ಲೂಕು ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆ ದಿನಗೂಲಿ ನೌಕರರ ಸಭೆ ಏ. 10 ರಂದು ಕಾ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯನ್ನುದ್ದೇಶಿಸಿ ಕಾ. ಆರ್. ಶ್ರೀನಿವಾಸ್ ಮಾತನಾಡಿದರು. 10 ಸಾವಿರ ಗ್ಯಾಂಗ್ ಮೆನ್‌ಗಳನ್ನು ಖಾಯಂ ಮಾಡಿರುವ ರಾಜ್ಯದ ಜನತಾ ಸರ್ಕಾರದ ಕ್ರಮವನ್ನು ಸ್ವಾಗತಿಸಿದ ಅವರು ಅಕ್ಷಂಸ್ಥರು ಪದವೀಧರರನ್ನು ಮತ್ತು ಮೇಸ್ತ್ರಿಗಳನ್ನು ಖಾಯಂ ಮಾಡುವಲ್ಲಿ ಸರ್ಕಾರ ಮೀನ ಮೇಷ ಎಣಿಸುತ್ತಿರುವುದನ್ನು ಖಂಡಿಸಿದರು. ಈ ಬಗ್ಗೆ ಸರ್ಕಾರ ಕೂಡಲೇ ಕ್ರಮಕೈಗೊಳ್ಳದಿದ್ದಲ್ಲಿ ಹೋರಾಟಕ್ಕೆ ಇಳಿಯಬೇಕಾಗುತ್ತದೆಂದು ಎಚ್ಚರಿಸಿದರು.

ಸಭೆಯಲ್ಲಿ ಕಾರ್ಯದರ್ಶಿ ಕಾ. ಎಚ್. ಆರ್. ರಾಮಚಂದ್ರ ಅವರು ಮಾತನಾಡಿದರು. ಕಾ. ಪ್ರೇಮ್‌ಕುಮಾರ್ ಅವರು ವಂದನಾರ್ಪಣೆ ಮಾಡಿದರು.

ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ರೈತರ ಹೋರಾಟಕ್ಕೆ ಕರೆ

ತಮ್ಮ ಜಮೀನುಗಳಿಗೆ ಸರಿಯಾಗಿ ನೀರು ತಲಪುವಂತೆ ನೀರಾವರಿ ಇಲಾಖೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲು ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ನೀರಾವರಿ ಕಾಲುವೆಗಳ ಕೊನೆಯ ತುದಿಯ ರೈತರು ಹೋರಾಟಕ್ಕೆ ಇಳಿಯಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಬೆಳಗಾವಿ ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ನಿತ್ಯಾನಂದ ಸ್ವಾಮಿ ಕರೆ ಕೊಟ್ಟಿದ್ದಾರೆ. ಅವರು ಇತ್ತೀಚೆಗೆ ಸವದತ್ತಿ ತಾಲ್ಲೂಕಿನ ಚಿಕ್ಕಉಳ್ಳಿಗೇರಿ ಗ್ರಾಮದಲ್ಲಿ ರೈತ ಸಂಘದ ಸರ್ವಸದಸ್ಯರ ಸಭೆಯಲ್ಲಿ ಮಾತನಾಡುತ್ತಿದ್ದರು. ಈ ವರ್ಷ ಮಳೆಯ ಅಭಾವ ಒಂದು ಕಡೆ,ನೀರು ಸರಿಯಾಗಿ ನಿಲುಕದಿರುವುದು ಇನ್ನೊಂದು ಕಡೆಯಾಗಿ ಕಾಲುವೆಗಳ ಕೊನೆತುದಿಯ ರೈತರು ಮುಖ್ಯವಾಗಿ ಯಾತ ನೀರಾವರಿ ಯೋಜನೆಗಳ ಅಡಿಯಲ್ಲಿ ಬರುವ ರೈತರು ಬೀಜ, ಗೊಬ್ಬರ ಹಾಗೂ ಬಿತ್ತನೆಗಾಗಿ ಖರ್ಚು ಮಾಡಿದ ಹಣವನ್ನು ಕಳೆದುಕೊಂಡು ಅಪಾರ ನಷ್ಟಕ್ಕೆ ಒಳಗಾಗಿದ್ದಾರೆ. ಈ ಬಗ್ಗೆ ಪರಿಹಾರ ಪಡೆಯಲು ಹಾಗೂ ಇನ್ನು ಮುಂದಾದರೂ ಕಾಲುವೆಗಳ ಕೊನೆತುದಿಯ ರೈತರಿಗೆ ಸಮರ್ಪಕ ನೀರಾವರಿ ಸೌಲಭ್ಯ ದೊರಕುವಂತಾಗಲು ರೈತರು ಸಾಮೂಹಿಕವಾಗಿ ಸರಕಾರವನ್ನು ಒತ್ತಾಯಿಸಬೇಕು ಎಂದು ಅವರು ಅಭಿಪ್ರಾಯ ಪಟ್ಟರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಎಸ್. ಡಿ. ಉಡಿಕೇರಿ ಮತ್ತು ಶ್ರೀ ಜಿ ಬಿ. ತೊರಗಲ್ಲ ರೈತರು ದೊಡ್ಡ ಸಂಖ್ಯೆಯಲ್ಲಿ ರೈತ ಸಂಘಕ್ಕೆ ಸದಸ್ಯರಾಗಬೇಕೆಂದು ಕೇಳಿಕೊಂಡರು.

ಚಿಕ್ಕ ಉಳ್ಳಿಗೇರಿ ಗ್ರಾಮ ಘಟಕದ ನೂತನ ಪದಾಧಿಕಾರಿಗಳಾಗಿ ಶ್ರೀ ಯಲ್ಲಪ್ಪ ಮುಶೆಪ್ಪ ಸುರಕೋಡ-ಅಧ್ಯಕ್ಷ, ರಾಯನಗೌಡ ಬಸನಗೌಡ ರಾಯನಗೌಡ-ಉಪಾಧ್ಯಕ್ಷ, ಚಂದ್ರಗೌಡ ಕಲ್ಲನಗೌಡ ಪಾಟೀಲ-ಕಾರ್ಯದರ್ಶಿ, ದೇಸಾಯಿಗೌಡ ರುದ್ರಗೌಡ ಪಾಟೀಲ-ಸಹಕಾರ್ಯದರ್ಶಿ. ಹೊಸ ಕಾರ್ಯಕಾರಿ ಸಮಿತಿಗೆ 7 ಜನ ರೈತರು ಆಯ್ಕೆಯಾಗಿದ್ದಾರೆ.

ಪುತ್ತೂರು ತಾಲ್ಲೂಕು ಸಮಿತಿ ಸಭೆ

ಕರ್ನಾಟಕ ಪ್ರಾಂತ ರೈತ ಸಂಘದ ದ ಕ. ಜಿಲ್ಲೆಯ ಪುತ್ತೂರು ತಾಲ್ಲೂಕು ಸಮಿತಿಯು ಕಾ. ತಂಬನ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಮೇಲಿನ ಸಮಿತಿಗಳ ತೀರ್ಮಾನಗಳ ಬಗ್ಗೆ ವಿವರಣೆ ನೀಡಿದ ಕಾ. ಎಂ. ಕೆ. ಅವರು ತಾಲ್ಲೂಕಿನಲ್ಲಿ ಕೆಲಸವನ್ನು ಚುರುಕುಗೊಳಿಸಿ ಸಂಘಟನೆಯನ್ನು ಬಲಪಡಿಸಲು ಕರೆ ಇತ್ತರು. ಸಭೆಯಲ್ಲಿ ಭಾಗವಹಿಸಿದ್ದ ಕಾ. ಸೂರ್ಯನಾರಾಯಣ ಭಟ್ ಅವರು ಸಿ. ಐ. ಟಿ. ಯು ಸಮ್ಮೇಳನ, ರೈತ-ಕಾರ್ಮಿಕರ ಸೌಹಾರ್ದತೆ ಬಗ್ಗೆ ಮಾತನಾಡಿದರು. ಕಾ. ಬಿ. ರಾಮಕೃಷ್ಣನವರು ಸಂಘಟನಾ ಸ್ಥಿತಿಗತಿಗಳ ಬಗ್ಗೆ ಹೇಳಿದರು. ಸದಸ್ಯತ್ವ ಸೇರಿಸುವ ಕೆಲಸವನ್ನು ತ್ವರಿತಗೊಳಿಸುವುದರೊಂದಿಗೆ ಸಂಘಟನೆಯನ್ನು ಬಲಪಡಿಸಲೂ, ಮುಂದೆ ಆದಷ್ಟು ಬೇಗ ಸಾಧ್ಯವಾದರೆ ತಾಲ್ಲೂಕು ಸಮ್ಮೇಳನ ನಡೆಸಲೂ ತೀರ್ಮಾನಿಸಲಾಯ್ತು. ಸರಕಾರಿ ಭೂಮಿಯಲ್ಲಿ ವಾಸಿಸುವ ಬಡಜನರ ಮೇಲೆ ಅತೀ ಹೆಚ್ಚು ದಂಡ ಹೇರಿ, ಅದನ್ನು ವಸೂಲು ಮಾಡಲು ಬಲಾತ್ಕಾರ ನಡೆಸುವ ಸರಕಾರದ ಕ್ರಮವನ್ನು ವಿರೋಧಿಸಲು ತೀರ್ಮಾನಿಸಲಾಯ್ತು.

ಸುಳ್ಯದಲ್ಲಿ ಬೀಡಿ ಕಾರ್ಮಿಕರ ಸಮ್ಮೇಳನ

ಇತ್ತೀಚೆಗೆ ದ. ಕ. ಜಿಲ್ಲೆಯ ಸುಳ್ಯದಲ್ಲಿ ಬೀಡಿ ಕಾರ್ಮಿಕರ ತಾಲ್ಲೂಕು ಮಟ್ಟದ ಒಂದು ದಿನದ ಸಮಾವೇಶ ಜರುಗಿತು. ಸುಮಾರು ಐದುನೂರು ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮಾವೇಶವು ಅತ್ಯಂತ ಶೋಷಿತಪಡುವ; ಅದರಲ್ಲೂ ಮಹಿಳಾ ಕಾರ್ಮಿಕರೆ ಜಾಸ್ತಿ ಆಗಿರುವ ಈ ಜನತೆಯ ಸಂಘಟನೆಯನ್ನು ತಾಲ್ಲೂಕಿನಲ್ಲಿ ಬಲಿಷ್ಠವಾಗಿ ಬೆಳೆಸಲು ಸಹಾಯಕವಾಯಿತು. ಭಾಗವಹಿಸಿದ್ದ ಐದುನೂರು ಮಂದಿ ಕಾರ್ಮಿಕರಲ್ಲಿ ತಾಲ್ಲೂಕಿನ ಹಳ್ಳಿ ಹಳ್ಳಿಗಳಿಂದ ಬಂದಿದ್ದ ಮಹಿಳಾ ಮತ್ತು ಬಾಲಕಿ ಕಾರ್ಮಿಕರೇ ನೂರಕ್ಕೆ ತೊಂಭತ್ತರಷ್ಟಿದ್ದರು. ಸಮಾವೇಶದ ಅಧ್ಯಕ್ಷತೆಯನ್ನು ಕಾ. ಸೂರ್ಯನಾರಾಯಣ ಭಟ್ ವಹಿಸಿದ್ದರು. ಸಂಘದ ಕಾರ್ಯದರ್ಶಿ ಹಾಗೂ ಬೀಡಿ ಕಾರ್ಮಿಕ ಕಾ. ಫಕೀರ ಪಾಟಾಳಿಯವರು ಸ್ವಾಗತ ಮಾಡಿದರು. ಇತ್ತೀಚೆಗೆ ಪೌರ ಸಮಿತಿಯ ಪ್ರತಿನಿಧಿಯಾಗಿ ಮುನಿಸಿಪಲ್ ಚುನಾವಣೆಯಲ್ಲಿ ಗೆದ್ದು ಪುರಸಭೆಗೆ ಅಧ್ಯಕ್ಷರಾಗಿರುವ ಶ್ರೀ ಬಾಲಕೃಷ್ಣ ಅವರು ಮುಖ್ಯ ಅತಿಥಿಗಳಾಗಿ ಬಂದು ಸಂದೇಶ ಕೋರಿದರು.

ಮುಖ್ಯವಾಗಿ ಮಾತನಾಡಿದ ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕಾ. ಯು. ಬಿ. ಲೋಕಯ್ಯ ಮತ್ತು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಶಾಸಕ ಮತ್ತು ರೈತ-ಕಾರ್ಮಿಕ ಮುಂದಾಳು

(8ನೇ ಪುಟ ನೋಡಿ)

ಕಳವು ಮಾಡಲೋ - ಕಾಪಿ ಮಾಡಲೋ ?

ಯಾವುದು ಉತ್ತಮ ಹಾಗೂ ಸುಲಭ. ಕಾಪಿ ಮಾಡುವುದೋ ಪ್ರಶ್ನೆ ಪತ್ರಿಕೆ ಕಳವು ಮಾಡುವುದೋ ? ಮೆಟ್ರಿಕ್‌ನಿಂದ ಹಿಡಿದು ಡಿಗ್ರಿ ಪರೀಕ್ಷೆಯ ವರೆಗೆ ಕಲಿಯುತ್ತಿರುವ ಲಕ್ಷಾವಧಿ ವಿದ್ಯಾರ್ಥಿಗಳನ್ನು ಕೆಣಕುತ್ತಿರುವ ಪ್ರಶ್ನೆ ಇದು. ಶೇ. 10ಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳಷ್ಟೇ ಕಾಪಿ ಕಳವಿನ ಚಿಂತನೆ ಗೊಳಗಾಗದೆ ತಮ್ಮ ಅಭ್ಯಾಸದ ಬಲದಿಂದಲೇ ಪ್ರಶ್ನೆ ಪತ್ರಿಕೆಯನ್ನೆದುರಿಸುತ್ತಾರೆ. ಬಾಕಿ ಉಳಿದ 90 ರಷ್ಟು ವಿದ್ಯಾರ್ಥಿಗಳು ಕಳವು, ಕಾಪಿ ಮಾಡುವುದರಲ್ಲೇ ಮೋಕ್ಷ ಕಾಣುತ್ತಾರೆ.

ಕಾಳಮುದ್ದನ ದೊಡ್ಡಿಯಲ್ಲಿ (ಮಂಡ್ಯಾ ಜಿಲ್ಲೆ) ಎರಡನೇ ವರ್ಷ ಪಿ. ಯು. ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಕಳವು. ವಿದ್ಯಾರ್ಥಿಗಳ ಬಂಧನ, ಪೋಲೀಸರ ಸಸ್ಪೆನ್‌ಶನ್. ಆ ಊರಲ್ಲಿ ಕಾಪಿ ನಡೆದಿದೆ, ಈ ಊರಲ್ಲಿ ಕಾಪಿಯ ಕಾಳಗ ಇದು ಪರೀಕ್ಷೆಯೋ ಜಾತ್ರೆಯೋ– ಈ ತಿಂಗಳ ಮೊದಲನೇ ವಾರದಿಂದ ಪತ್ರಿಕೆಗಳಲ್ಲಿ ದಿನನಿತ್ಯ ಓದಲು ಸಿಗುವ ಸುದ್ದಿಗಳಿವು. ಅದು ಡಿಗ್ರಿ ಪರೀಕ್ಷೆನೇ ಇರಲಿ ಮೆಟ್ರಿಕ್ ಪರೀಕ್ಷೆನೇ ಇರಲಿ- ಪರೀಕ್ಷಾ ಕೇಂದ್ರಗಳೆಲ್ಲ ಜಾತ್ರೆಯ ಸ್ವರೂಪ ತಾಳಿವೆ. ಕಿಟಕಿ-ಬಾಗಿಲುಗಳನ್ನೇರಿ ಪ್ರಶ್ನೆ ಪತ್ರಿಕೆಯನ್ನು ವಿದ್ಯಾರ್ಥಿಗಳಿಂದ ಪಡೆದು ಅವುಗಳಿಗೆ ಉತ್ತರದ ಚೀಟಿ ಕಳುಹಿಸುವುದು ಒಂದೆಡೆ ಯಾದರೆ, ಗೈಡ್-ಚೀಟಿಗಳನ್ನು ಟೇಬಲಿನ ಮೇಲೆ ಇಟ್ಟು ಕೊಂಡೇ ಉತ್ತರ ಬರೆಯುವ ಭೂಪರ ದೃಶ್ಯ ಮತ್ತೊಂದೆಡೆ. ನಮ್ಮ ದೇಶದ ಪರೀಕ್ಷಾ ಕೇಂದ್ರಗಳಲ್ಲಿ ನಾವು ಕಾಣುವ ದಾರುಣ, ಚಿಂತಾ ಜನಕ, ಅವಮಾನ ಕಾರಕ ನಾಚಿಕೆಗೇಡಿ ದೃಶ್ಯ. ಸ್ವಾತಂತ್ರ್ಯ ಪಡೆದ 36 ನೇ ವರ್ಷದಲ್ಲೂ ಪರೀಕ್ಷಾ ಪದ್ಧತಿ ಈ ರೀತಿಯಲ್ಲೇ ಮುಂದುವರಿಯುವುದು ನಮ್ಮ ದೇಶದಲ್ಲಿರುವ ಶಿಕ್ಷಣ ಪದ್ಧತಿ ಯಾವ ರೀತಿ ಕೊಳೆತು ನಾರುತ್ತಿದೆಂಬುದಕ್ಕೆ ಉದಾಹರಣೆ. ಪಿ. ಯು. ಸಿ. ಯ ದ್ವಿತೀಯ ಪರೀಕ್ಷೆಯ ಕೆಲವು ಪ್ರಶ್ನೆ ಪತ್ರಿಕೆಗಳು ಪರೀಕ್ಷಾ ಕೇಂದ್ರದಿಂದ ಕಳುವಾದುವಂತೆ. ಕಾಲೇಜ ಪ್ರಿನ್ಸಿಪಾಲರ ಕೋಣೆಯ ಕಿಟಕಿಯ ಕಂಬಿಗಳನ್ನು ಮುರಿದು ಒಳಗೆ ನುಗ್ಗಿ ಭದ್ರ ಕಪಾಟನ್ನು ಭೇದಿಸಿ ಪ್ರಶ್ನೆ ಪತ್ರಿಕೆಗಳನ್ನು ಕಳವು ಮಾಡಲಾಗಿದೆ. ಪೋಲೀಸರ ಬಂದೊಬಸ್ತಿನಲ್ಲಿ ಈ ಪತ್ರಿಕೆಗಳನ್ನಿಟ್ಟಿದ್ದರೂ, ಪೋಲೀಸ ಕಾವಲಿನ ನಿರ್ಲಕ್ಷ್ಯತನ ಎಷ್ಟಿತ್ತೆಂಬುದನ್ನು ಈ ಕೃತಿ ತೋರಿಸುತ್ತದೆ.

ಅನುಭವದಿಂದ ಅಧಿಕಾರಿಗಳು ಪಾಠ ಕಲಿಯುವುದಿಲ್ಲೆಂಬುದಕ್ಕೆ ಇದೊಂದು ಸಾಕ್ಷಿ. 1982 ರಲ್ಲಿ ಬಳ್ಳಾರಿ ಜಿಲ್ಲೆಯ ಶಿರಗುಪ್ಪ ಕಾಲೇಜನಲ್ಲಿ ಪಿ. ಯು. ಸಿ. ಪ್ರಶ್ನೆ ಪತ್ರಿಕೆಗಳು ಬಹಿರಂಗ ಗೊಂಡಾಗ ಪರೀಕ್ಷೆ ಮುಂದೂಡಲ್ಪಟ್ಟಿತ್ತು. ಅಂದಿನ ಘಟನೆಯ ನಂತರ ಪರೀಕ್ಷಾ ಪತ್ರಿಕೆಗಳನ್ನು ಒಂದು ವಾರ ಮುಂಚಿತವಾಗಿ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಬಾರದೆಂದು ನಿರ್ಣಯ ಮಾಡಲಾಗಿತ್ತು. ಆದರೆ ಅಂಥ ಎಚ್ಚರಿಕೆಯನ್ನು ಕೈಬಿಟ್ಟಂತೆ ಕಂಡು ಬರುತ್ತದೆ. ಹತ್ತಿರದ ಕೇಂದ್ರಗಳಿಗೆ ಹಿಂದಿನದಿನವೂ ದೂರದ ಕೇಂದ್ರಗಳಿಗೆ ಒಂದೆರಡು ದಿವಸ ಮುಂಚಿತವಾಗಿಯೂ ಪತ್ರಿಕೆಗಳನ್ನು ಕಳುಹಿಸುವ ವ್ಯವಸ್ಥೆ ಮಾಡಬಹುದು. ಅಥವಾ ಪ್ರಶ್ನೆ ಪತ್ರಿಕೆಗಳನ್ನು ಸುಭದ್ರವಾಗಿಡುವ ವ್ಯವಸ್ಥೆಯಾದರೂ ಬೇಕು. ಪಿ. ಯು. ಸಿ. ಬೋರ್ಡು ತನ್ನ ತಪ್ಪನ್ನು ತಿದ್ದಿಕೊಂಡು ಈ ರೀತಿ ಕಳವಾಗುವುದನ್ನಾಗಲೀ, ಪ್ರಶ್ನೆ ಪತ್ರಿಕೆ ಬಹಿರಂಗ ವಾಗುವುದನ್ನಾಗಲೀ ತಡೆಗಟ್ಟಲು ಪ್ರಯತ್ನಿಸದಿರುವುದು ಅಕ್ಷಮ್ಯ. ಪರೀಕ್ಷಾ ಪದ್ಧತಿಯಲ್ಲಿ ಅವ್ಯವಹಾರ ಆಳವಾಗಿ ಬೇರೂರಿ ನಿಂತಿದೆ, ಅದನ್ನು ತಡೆಗಟ್ಟಲು ಯಾವದೇ ಕ್ರಮ ಕೈಗೊಳ್ಳಲಾಗುತ್ತಿಲ್ಲೆಂದು ಕಂಡು ಬರುತ್ತಿದೆ.

ಒಂದೆಡೆ ಚಾಕು-ಚೂರಿಯ ಬೆದರಿಕೆಯಿಂದ ಕಾಪಿ ಮಾಡುವುದು ಒಂದೇ ಸಮನೆ ಮುಂದುವರಿಯುತ್ತಿರುವಾಗ, ಮತ್ತೊಂದೆಡೆ ಪ್ರಶ್ನೆ ಪತ್ರಿಕೆಗಳ ಕಳವು, ಬಹಿರಂಗ ಗೊಳಿಸುವಿಕೆಗಳೆಲ್ಲ ಶಿಕ್ಷಣ ಕ್ಷೇತ್ರದಲ್ಲಿ ಭ್ರಷ್ಟಾಚಾರ ಎಷ್ಟು ತುಳುಕಾಡುತ್ತಿದೆಂಬುದನ್ನು ತೋರಿಸಿ ಕೊಡುತ್ತದೆ.

ಪಶ್ಚಿಮ ಬಂಗಾಲದಲ್ಲಿ ಕಾಂಗ್ರೆಸ್ ಆಡಳಿತೆಯಿದ್ದಾಗ, ಬರೀ ಪ್ರಶ್ನೆ ಪತ್ರಿಕೆಗಳ ಕಳವು, ಕಾಪಿ ಮಾಡುವುದಷ್ಟೇ ಅಲ್ಲ, ಯಾವ ಪರೀಕ್ಷೆಯನ್ನು ನಡೆಸಲು ಕೂಡ ಕೆಲವೇ ವಿದ್ಯಾರ್ಥಿ ಗೂಂಡಾ ಜನರು ಬಿಡುತ್ತಿರಲಿಲ್ಲ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ ಪಾರ್ಟಿ ಮುಖಂಡತ್ವದ ಎಡರಂಗ ಸರಕಾರ ಅಧಿಕಾರಕ್ಕೆ ಬಂದ ವರ್ಷದಿಂದಲೇ ಶಿಕ್ಷಣ ರಂಗದಲ್ಲಿ ತಳವೂರಿ ಮೆರೆಯುತ್ತಿದ್ದ ಗೂಂಡಾಗಿರಿ, ಭ್ರಷ್ಟಾಚಾರ, ಅವ್ಯವಹಾರಗಳನ್ನೆಲ್ಲ ಸಂಪೂರ್ಣ ನಾಶಮಾಡಿ ಶಿಕ್ಷಣ–ಪರೀಕ್ಷಾ ಪದ್ಧತಿಗಳನ್ನು ನಿರ್ಮಲ ಗೊಳಿಸಲಿಕ್ಕೆ ಶಕ್ಯವಾಗಿದೆ. ಪಶ್ಚಿಮ ಬಂಗಾಲದಲ್ಲಿ ಪ್ರಶ್ನೆ ಪತ್ರಿಕೆಗಳ ಕಳವಾಗಲಿ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು ಕಾಪಿ ಮಾಡುವುದಾಗಲೀ ನಿಂತು ಹೋಗಿದೆ. ಆದರೆ ಕಾಂಗ್ರೆಸ್ ಆಳುವ ಇತರ ರಾಜ್ಯಗಳಲ್ಲೆಲ್ಲ ಈ ಅನಿಷ್ಟ ವ್ಯಾಪಕವಾಗಿ ಹಬ್ಬಿಕೊಂಡಿದೆ.

ಬಂಡವಾಳಶಾಹಿ ಪದ್ಧತಿಯಲ್ಲಿರುವ ದೋಷಗಳಲ್ಲಿ ಇದೊಂದು. ನಮ್ಮ ರಾಜ್ಯದಲ್ಲಿ ಜನತಾ ಸರಕಾರವಿದೆ. ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಕ್ರಮ ಕೈಗೊಂಡಿರುವುದಿಲ್ಲ. ವಿದ್ಯಾರ್ಥಿಗಳಲ್ಲಿ, ಶಿಕ್ಷಕರಲ್ಲಿ ವಿಶ್ವಾಸ ಉಂಟುಮಾಡಿರುವುದಿಲ್ಲ.

ತನ್ನ ಇಡೀ ಜೀವನದ ಭವಿಷ್ಯತ್ತಿಗೆ ಸಂಬಂಧವೇ ಇಲ್ಲದಂತಾ ಪಠ್ಯ ಪುಸ್ತಕಗಳನ್ನು ಓದೀ ಪರೀಕ್ಷೆ ಪಾಸಾಗುವುದು ದುಸ್ತರವಾಗುವ ಕಾರಣದಿಂದಲೇ ಈ ಅವ್ಯವಹಾರಗಳು ನಡೆಯುತ್ತಿವೆ. ಶಿಕ್ಷಣ ಪದ್ಧತಿಯಲ್ಲಿ, ಪಠ್ಯ ಪುಸ್ತಕಗಳಲ್ಲಿ, ಕಲಿಸುವ ಪದ್ಧತಿಯಲ್ಲಿ ಶಿಕ್ಷಕ-ವಿದ್ಯಾರ್ಥಿ ಸಂಬಂಧದಲ್ಲಿ ಸಂಪೂರ್ಣ ಬದಲಾವಣೆ ಅತ್ಯಗತ್ಯ. ಶಿಕ್ಷಕ, ವಿದ್ಯಾರ್ಥಿ, ಶಿಕ್ಷಣ ಪದ್ಧತಿ ಇವರೊಳಗೆ ನಿಕಟ ಸಂಬಂಧ, ಹೊಂದಾಣಿಕೆ ಅಗತ್ಯ. ಅಂಥ ಕ್ರಾಂತಿಕಾರಿ ಬದಲಾವಣೆಯನ್ನು ತರಲು ಜನತಾ ಸರಕಾರ, ಅದರ ಶಿಕ್ಷಣ ಮಂತ್ರಿ ಪ್ರಯತ್ನಿಸುವರೇ ಎಂಬ ಪ್ರಶ್ನೆ. ಹಾಗಾಗ ಬೇಕಾದರೆ ವಿದ್ಯಾರ್ಥಿಗಳ, ಶಿಕ್ಷಕರ, ಪಾಲಕರ ಚಳುವಳಿ ಅಗತ್ಯ ಶಿಕ್ಷಕರ, ವಿದ್ಯಾರ್ಥಿಗಳ ಸಂಘಟನೆ ಈ ಜವಾಬ್ದಾರಿಯನ್ನರಿತು ಶಿಕ್ಷಣ, ಪರೀಕ್ಷಾ ಪದ್ಧತಿಗಳಲ್ಲಿ ಬದಲಾವಣೆಗಾಗಿ ಹೋರಾಡಲಿ.

★

ಪುತ್ತೂರು ತಾಲ್ಲೂಕು ಕೆಲಸಗಾರರ ಸಂಘದ ಸಭೆ

ಏ. 1 ರಂದು ಸಿ.ಐ.ಟಿ.ಯು. ನೇತೃತ್ವದ ಪುತ್ತೂರು ತಾಲ್ಲೂಕು ಕೆಲಸಗಾರರ ಸಂಘದ ಸಭೆಯು ಸಂಘದ ಅಧ್ಯಕ್ಷರಾದ ಕಾ|| ಬಿ. ರಾಮಕೃಷ್ಣನವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ದಕ್ಷಿಣ ಕನ್ನಡ ಜಿಲ್ಲಾ ಬೀಡಿ ಫೆಡರೇಶನ್‌ನ ಪ್ರಧಾನ ಕಾರ್ಯದರ್ಶಿ ಕಾ|| ಯು. ಬಿ. ಲೋಕಯ್ಯನವರು ಆಗಮಿಸಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಕಾ|| ಬಿ. ಜೋಮನವರು ಸ್ವಾಗತಿಸಿದರು. ಮುಖ್ಯ ಅತಿಥಿಗಳಾದ ಕಾ|| ಯು. ಬಿ. ಲೋಕಯ್ಯನವರು ಸಿ.ಐ.ಟಿ.ಯು. ಬಗ್ಗೆ ಮಾತನಾಡಿದರು.

ಬೀಡಿ ಕಾರ್ಮಿಕರು ನಡೆಸಿ, ಗಳಿಸಿದ ಹಕ್ಕು, ಸವಲತ್ತುಗಳನ್ನು ವಿವರಿಸಿದರು. ಕಳೆದ ವರ್ಷ ನಡೆಸಿದ ಹೋರಾಟದ ಫಲವಾಗಿ ಈ ಬಾರಿ ಬೆಲೆ ಏರಿಕೆಯ ಸೂಚ್ಯಂಕದಂತೆ ಭತ್ತೆ ಸಿಗಲು ಅವಕಾಶವಾಯಿತು. ಬೋನಸ್, ಮಜೂರಿಯಲ್ಲಿ ಹೆಚ್ಚಳವೇ ಮೊದಲಾದ ಸವಲತ್ತುಗಳು ಇಂದು ಬೀಡಿ ಕಾರ್ಮಿಕರಿಗೆ ಸಿಕ್ಕಿದ್ದರೆ, ಅದು ನಿರಂತರ ಹೋರಾಟದ ಫಲದಿಂದ ಎಂದು ಹೇಳಿದ ಅವರು ಅಸಂಘಟಿತ ಪ್ರದೇಶಕ್ಕೆ ಈ ಸವಲತ್ತುಗಳನ್ನು ಮಜೂರರಿಗೆ ನೀಡದೇ ಮೋಸ ಮಾಡುತ್ತಿದ್ದಾರೆ. ಪುತ್ತೂರಿನಂತಹ ಪಟ್ಟಣ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಬೀಡಿ ಮಜೂರರಿದ್ದಾರೆ. ಅವರೆಲ್ಲರಿಗೂ ತುಂಬಾ ಮೋಸವಾಗುತ್ತಿದೆ. ಪ್ರತಿಯೊಬ್ಬ ಕಾರ್ಮಿಕನೂ ಸಿ.ಐ.ಟಿ.ಯು.ವಿನ ಅಡಿಯಲ್ಲಿ ಸಂಘಟಿತನಾಗಿ ಹೋರಾಡಬೇಕೆಂದು ಕರೆ ನೀಡಿದರು. ಕಾ. ಬಿ. ರಾಮಕೃಷ್ಣ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಘದ ಕಾರ್ಯದರ್ಶಿ ವಿ ಎಸ್. ಅಬ್ರಹಾಂ ಅವರು ಕೊನೆಯಲ್ಲಿ ವಂದಿಸಿದರು.

ಬೀಡಿ ಲೇಬರ್ ಯೂನಿಯನ್ ಸಭೆ

ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ ಕಾರ್ಯಕಾರಿ ಸಮಿತಿ ಸಭೆಯು ಏ. 6 ರಂದು ನಾರಾಯಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಮೇ ತಿಂಗಳ 14 ರಿಂದ 17 ರವರೆಗೆ ಮಂಗಳೂರಿನಲ್ಲಿ ನಡೆಯುವ ರಾಜ್ಯ ಸಿ.ಐ.ಟಿ.ಯು. ಸಮ್ಮೇಳನವನ್ನು ಯಶಸ್ವಿ ಗೊಳಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು. ಸಂಘದ ಕಾರ್ಯದರ್ಶಿ ಶ್ರೀ ಯು. ಬಿ. ಲೋಕಯ್ಯನವರು ಸಮ್ಮೇಳನದ ಮಹತ್ವದ ಕುರಿತು ಮಾತನಾಡಿದರು.

ವಾರ್ಷಿಕ ಮಹಾಸಭೆ

ಡೆಮಾಕ್ರಟಿಕ್ ಯೂತ್ ಲೀಗ್‌ನ 29 ನೇ ವಾರ್ಷಿಕ ಮಹಾಸಭೆಯು 1·4·1984 ರಂದು ಲೀಗಿನ ಅಧ್ಯಕ್ಷರಾದ ಜೆ. ಯಾಧವಕುಂದರ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಕಾರ್ಯದರ್ಶಿಯವರು ಮಂಡಿಸಿದ 83-84 ರ ಲೆಕ್ಕ ಪತ್ರವನ್ನು ಸರ್ವಾನುಮತದಿಂದ ಅಂಗೀಕರಿಸಿತು. 84-85 ನೇ ವರ್ಷಕ್ಕೆ ಈ ಕೆಳ ಕಂಡವರನ್ನು ಪದಾಧಿಕಾರಿಗಳಾಗಿ ನೇಮಕ ಮಾಡಲಾಯಿತು.

ಜೆ. ಯಾಧವ ಕುಂದರ್ (ಅಧ್ಯಕ್ಷ) ಕೆ. ಪ್ರಭಾಕರ್ ನ್ಯಾಕ್ (ಉಪಾಧ್ಯಕ್ಷ) ಕೆ. ಲೋಕನಾಥ್ (ಕಾರ್ಯದರ್ಶಿ) ಸುಧಾಕರ್ ಅಮೀನ್ ಮತ್ತು ಆರ್. ವಿಜಯಕುಮಾರ್ (ಜತೆ ಕಾರ್ಯದರ್ಶಿಗಳು) ಜೆ. ಪುರುಷೋತ್ತಮ (ಕೋಶಾಧಿಕಾರಿ) ಹಾಗೂ ಸಮಿತಿ ಸದಸ್ಯರಾಗಿ ಜೆ. ವೀರಪ್ಪ, ಕೆ. ರಂಗಪ್ಪ ಸಾಲಿಯನ್, ಕೆ. ದಯಾನಂದ, ಮೋಹನ್‌ಕುಮಾರ್ ಆಯ್ಕೆಯಾದರು. ಸಭೆಯಲ್ಲಿ ಲೀಗಿನ ಹಿರಿಯ ಸದಸ್ಯರಾದ ಜೆ. ವೀರಪ್ಪನವರು ಲೀಗಿನ ಚಟುವಟಿಗೆ ಬಗ್ಗೆ ಸೂಕ್ತ ಸಲಹೆಗಳನ್ನು ನೀಡಿದರು. ಕೊನೆಗೆ ಲೀಗಿನ ಕಾರ್ಯದರ್ಶಿ ವಂದನಾರ್ಪಣೆ ಮಾಡಿದರು.

ಡಿ. ವೈ. ಎಫ್. ಐ. ಘಟಕ ಸ್ಥಾಪನೆ

ಉಡುಪಿಯಲ್ಲಿ ತಾ. 1·4·84 ರಂದು ಯುವಕರ ಸಭೆಯೊಂದು ಕಾಮ್ರೇಡ್ ಸುಧಾಕರರವರ ಅಧ್ಯಕ್ಷತೆಯಲ್ಲಿ ಜರಗಿ ಡಿ ವೈ. ಎಫ್. ಐ. ಘಟಕದ ಶಾಖೆಯನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

ಕಾಮ್ರೇಡ್‌ಗಳಾದ ಮೋಹನ್ ಕುಮಾರ್ ಮತ್ತು ಕೆ. ಶಂಕರನವರು ಯುವಕರ ಸಮಸ್ಯೆಗಳನ್ನು ಮತ್ತು ದಕ್ಕೆ ಪರಿಹಾರ ಹೇಗೆ ಎಂಬುದಕ್ಕೆ ಉದಾಹರಣೆ ನೀಡಿ ಇಡಿ ದೇಶದ ಯುವಕರ ಪ್ರವಾಹದೊಂದಿಗೆ ಸೇರಿ ಹೇಗೆ ಮುಂದುವರಿಯ ಬಹುದು ಎಂದು ತಿಳಿಸಿದರು.

ಸಂಘಟನಾ ಸಮಿತಿಯೊಂದನ್ನು ರಚಿಸಿ ಕಾಂ. ರಮೇಶ್ ಮೆಂಡನರು ಸಂಚಾಲಕರಾಗಿಯೂ ಕಾಂ. ಶೇಖರ್ ಪೂಜಾರಿಯವರು ಸಹ ಸಂಚಾಲಕರಾಗಿಯೂ ಆರಿಸಲಾಯಿತು.

ವಾರ್ಷಿಕ ಮಹಾಸಭೆ

ಉಡುಪಿ ನೇಯ್ಗೆ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆ ಏಪ್ರಿಲ್ 1 ರಂದು ಕೊರಂಗ್ರಪಾಡಿಯಲ್ಲಿ ತ್ರಿಸ್ತಾನಂದತೇಜಪಾಲರ ಅಧ್ಯಕ್ಷತೆಯಲ್ಲಿ ಜರುಗಿತು

ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರ ಮಂಜೂರು ಮಾಡಲಾಯಿತು

ಕಾ. ಡೇವಿಡ್ ಕರ್ಕಡ, ಕೆ. ಸಂಜೀವ್ ಪ್ರೆಡ್ರಿಕ್ಸ್ ಅಳ್ವಲರ್, ಸೋನ್ನ ಮೊದಲಾದವರು ಮೇ 14 ರಿಂದ ಸಮಾವೇಶಗೊಳ್ಳುವ ರಾಜ್ಯ ಸಿ. ಐ. ಟಿ. ಯು. ಸಮ್ಮೇಳನ ಯಶಸ್ವಿ ಮಾಡುವ ಕುರಿತು ವಿವರಿಸಿದರು.

ಪ್ರಾರಂಭದಲ್ಲಿ ಸಂಘದ ಸದಸ್ಯರಾಗಿ ಮೃತಗೊಂಡ ಅಲ್ಫ್ರೆಡ್ ಕರ್ಕಡ ಅವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ತಾವೇ ದಂಡ ತೆತ್ತರು

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಅದರ ವೈಸ್-ಚಾನ್ಸಲರ್ ಡಾ. ನಂಜುಂಡಪ್ಪ ಒಂದು ವಿಚಿತ್ರ ಪರಂಪರೆಯನ್ನೇ ಸೃಷ್ಟಿಸಿದ್ದಾರೆ. ತಾವು ಮಾಡಿದ ತಪ್ಪಿಗೆ ತಾವೇ ದಂಡ ಹಾಕಿಕೊಂಡಿದ್ದಾರೆ. ಫೆ. 23 ರಂದು ಈ ವಿಷಯ ಬೆಳಕಿಗೆ ಬಂತು. ಸಹಾಯ ಬೇಕೆಂದು ಒಬ್ಬ ವಿದ್ಯಾರ್ಥಿ ಅರ್ಜಿ ಸಲ್ಲಿಸಿದ್ದನ್ನು ಶಿಸ್ತುಭಂಗ ಕ್ರಮವೆಂದು ಪರಿಗಣಿಸಿ ಆ ವಿದ್ಯಾರ್ಥಿ ದಂಡ ಕೊಡಬೇಕೆಂದು ಆಜ್ಞೆ ಮಾಡಿದ್ದರಂತೆ. ಎರಡು ದಿವಸದ ನಂತರ ತಾನು ಮಾಡಿದ್ದು ತಪ್ಪೆಂದು ಅರಿವಾದಾಗ, ತಾನು ಮಾಡಿದ ತಪ್ಪಿಗಾಗಿ ತಾವೇ ರೂ. 100 ದಂಡ ತೆರಬೇಕೆಂಬ ಆಜ್ಞೆ ಹೊರಡಿಸಿದೆನೆಂದೂ ಪತ್ರಿಕಾ ಕರ್ತರಿಗೆ ತಿಳಿಸಿದರಂತೆ.

(1ನೇ ಪುಟದಿಂದ)

ಈ ಎರಡು ಸಮಾವೇಶಗಳ ಕರೆಗಳ ಪ್ರಕಾರ ನವದೆಹಲಿಯಲ್ಲಿ 18-4-1984 ರಂದು ಕಾರ್ಮಿಕರ "ಪಾರ್ಲಿಮೆಂಟ್ ಚಲೋ" ಮತ್ತು ಬೃಹತ್ ಪ್ರದರ್ಶನ ನಡೆಯಿತು. ಚಾರಿತ್ರಿಕ ಕೆಂಪು ಕೋಟೆಯಿಂದ ಹೊರಟ ದೇಶದ ಮೂಲೆ ಮೂಲೆಗಳಿಂದ, ಎಲ್ಲಾ ಕೈಗಾರಿಕೆಗಳಿಂದ, ಉದ್ಯಮಗಳಿಂದ ಬಂದಿದ್ದ ಕಾರ್ಮಿಕರ ಬೃಹತ್ ಜಾತಾ ಸಂಸತ್ ಭವನದ ಮುಂದಿರುವ ಬೋಟ್ ಕ್ಲಬ್ ಲಾನ್ಸ್‌ನಲ್ಲಿ ಪ್ರಚಂಡ ಪ್ರದರ್ಶನವಾಗಿ ಸಮಾವೇಶಗೊಂಡು ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ, ಜನವಿರೋಧಿ ಧೋರಣೆಗಳ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸಿತು.

ಕಾರ್ಮಿಕರ ಈ ಬೃಹತ್ ಪ್ರದರ್ಶನವನ್ನು ಉದ್ದೇಶಿಸಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಸಮರ್ ಮುಖರ್ಜಿ, ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಇಂದ್ರಜೀತ್ ಗುಪ್ತ ಮತ್ತು ಇತರ ಮುಖಂಡರು ಮಾತನಾಡಿದರು. ಅನಂತರ ರಾಷ್ಟ್ರೀಯ ಆಂದೋಳನ ಸಮಿತಿಯ ಉನ್ನತ ನಿಯೋಗವು ರಾಷ್ಟ್ರಾಧ್ಯಕ್ಷ ಜೈಲ್ ಸಿಂಗರನ್ನು ಭೇಟಿ ಮಾಡಿ ಮನವಿಯನ್ನು ಕೊಟ್ಟರು.

[ಮನವಿಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು]

(6ನೇ ಪುಟದಿಂದ)

ಕಾ. ಪಿ. ರಾಮಚಂದ್ರರಾವ್ ಅವರು ಬೀಡಿ ಕಾರ್ಮಿಕರ ಸಮಸ್ಯೆ ಮತ್ತು ಸಂಘಟನೆಯ ಬಗ್ಗೆ ಮನದಟ್ಟುವಂತೆ ಹೇಳಿದರು. ಸಭೆಯಲ್ಲಿ ಭಾಗವಹಿಸಿದ್ದ ಕಾ. ಎಂ. ಕೆ. ಭಟ್ ಅವರೂ ಮಾತನಾಡಿ ಅತ್ಯಂತ ಹೆಚ್ಚಾಗಿ ಮಹಿಳಾ ಕಾರ್ಮಿಕರೇ ಇರುವ ಈ ಜನತೆಯನ್ನು ಸಂಘಟಿಸುವುದು ಅತೀಅಗತ್ಯ ಎಂದರು. ಸಮಾವೇಶದ ಕೊನೆಗೆ ಕಾ. ಸೂರ್ಯನಾರಾಯಣ ಭಟ್ ಅಧ್ಯಕ್ಷರೂ, ಕಾ. ಪಕೀರ ಪಾಟಾಳಿ ಪ್ರಧಾನ ಕಾರ್ಯದರ್ಶಿಗಳೂ, ಇನ್ನೂ ಕೆಲವು ಪದಾಧಿಕಾರಿಗಳು ಹಾಗೂ ಸುಮಾರು 20 ಸದಸ್ಯರುಗಳೂ ಸೇರಿದಂತೆ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕಾ. ಎಸ್. ಬಿ. ಬಾಲಕೃಷ್ಣಗೌಡ, ಕಾ. ಮೋನಪ್ಪಗೌಡ, ಕಾ. ಪದ್ಮಾವತಿರೈ, ಕಾ. ಕುಂಞಕಣ್ಣ, ಕಾ. ರಾಘವ, ಕಾ. ಜಾನಕಿ ಇವರು ಇನ್ನುಳಿದ ಕೆಲವು ಪದಾಧಿಕಾರಿಗಳು. ಸುಳ್ಯ ತಾಲೂಕಿನಲ್ಲಿ ಸುಮಾರು ಹನ್ನೆರಡು ಸಹಸ್ರ ಬೀಡಿ ಕಾರ್ಮಿಕರಿದ್ದು, ಅವರೆಲ್ಲರ ಹೋರಾಟಗಾರ ಸಂಘಟನೆಯಾಗಿ ಬೆಳೆಯುವುದಕ್ಕೆ ಸಮಾವೇಶವು ಸ್ಫೂರ್ತಿಯನ್ನಿತ್ತಿತು.

ವೈಕೋ ಕಾರ್ಮಿಕ ಸಂಘಕ್ಕೆ ಗೌರವ ಸದಸ್ಯರಾಗಿ ಕಾ. ಸೂರಿ ಆಯ್ಕೆ

1980 ನೇ ಇಸವಿಯಲ್ಲಿ ವೈಕೋ ಕಾರ್ಮಿಕ ಸಂಘಕ್ಕೆ ನಡೆಯಬೇಕಾಗಿದ್ದ ಚುನಾವಣೆಗೆ, ಕಾರ್ಮಿಕ ಕಮಿಷನರ್‌ರವರು ಚುನಾವಣಾ ಅಧಿಕಾರಿಯನ್ನು ನೇಮಕ ಮಾಡಿದ್ದರು. ಆ ಸಂದರ್ಭದಲ್ಲಿ ಸಂಘಟನೆಯನ್ನು ಮುರಿಯುವ ದೃಷ್ಟಿಯಿಂದ, ಅಂದಿನ ಆಳುವ ಪಕ್ಷದ ಪ್ರಮುಖ ವ್ಯಕ್ತಿ ಎಫ್. ಎಂ. ಖಾನ್ ರವರ ಮೂಲಕ, ವೈಕೋ ಆಡಳಿತ ವರ್ಗದವರು ಎಡರು ತೊಡರುಗಳನ್ನು ತಂದು, ಚುನಾವಣೆ ನಡೆಯದ ಹಾಗೆ ಮಾಡಿದರು. ನಂತರ, ಕಾರ್ಖಾನೆಯ ಒಳಗೆ ಪೋಲೀಸ್‌ನವರ ಬೆಂಬಲ ಪಡೆದು, ಗೂಂಡಾಗಳ ಮೂಲಕ ಕತ್ತಿ, ಚಾಕುಗಳನ್ನು ತೋರಿಸಿ ಕಾರ್ಮಿಕರನ್ನು ಹೆದರಿಸಿ ಅವರ ಸಹಿಯನ್ನು ಪಡೆದು ಎಫ್. ಎಂ. ಖಾನ್ ಸಂಘದ ಅಧ್ಯಕ್ಷರೆಂದು ಪ್ರತಿಪಾದಿಸುತ್ತಿದ್ದರು.

ಕಾರ್ಮಿಕ ನ್ಯಾಯಾಲಯದಲ್ಲಿ ಕಾಂ. ಸೂರಿಯವರು ಸಂಘದ ಅಧ್ಯಕ್ಷರಾಗಿ, ಸಂಘದ ಪರವಾಗಿ ವಿವಾದಗಳನ್ನು ನಡೆಸುತ್ತಿದ್ದರು. ಶ್ರೀ ಎಫ್. ಎಂ. ಖಾನ್ ತಾವು ಸಂಘದ ಅಧ್ಯಕ್ಷರೆಂದು, ಸಂಘದ ಪರವಾಗಿ ಕಾ. ಸೂರಿಯವರಿಗೆ ಬದಲಾಗಿ ತಾವು ಸಂಘವನ್ನು ಪ್ರತಿನಿಧಿಸುವುದಾಗಿ ಒಂದು ಅರ್ಜಿಯನ್ನು ಹಾಕಿದರು. ಈ ಅರ್ಜಿಯ ಮೇಲೆ ದಾಖಲೆಗಳ ಮೂಲಕ ಮತ್ತು ಸಾಕ್ಷಿ ವಿಚಾರಣೆಯ ನಂತರ ಕಾಂ. ಸೂರಿಯವರೇ ಸಂಘದ ಅಧ್ಯಕ್ಷರೆಂದು, ಎಫ್. ಎಂ. ಖಾನ್ ರವರು ಕಾನೂನು ಪ್ರಕಾರ ಅಧ್ಯಕ್ಷರಾಗಿ ಆಯ್ಕೆಯಾಗಲಿಲ್ಲವೆಂದು ಕಾರ್ಮಿಕ ನ್ಯಾಯಾಲಯವು ತೀರ್ಪು ನೀಡಿತು. ಇದರ ವಿರುದ್ಧ ವೈಕೋ ಆಡಳಿತ ವರ್ಗದವರು ಮತ್ತು ಎಫ್. ಎಂ. ಖಾನ್‌ರವರು ಹೈಕೋರ್ಟಿನ ಮುಂದೆ ರಿಟ್ ಅರ್ಜಿಯನ್ನು ಹಾಕಿದರು. ಈ ಅರ್ಜಿಯ ಮೇಲೆ ವಾದ ವಿವಾದಗಳ ನಂತರ, ಕಾರ್ಮಿಕ ನ್ಯಾಯಾಲಯದ ತೀರ್ಪನ್ನು ಊರ್ಜಿತ ಮಾಡಿ ರಿಟ್ ಅರ್ಜಿಗಳನ್ನು ತಿರಸ್ಕರಿಸಿದರು. ಈ ಸಮಸ್ಯೆಯನ್ನು ಬಗೆಹರಿಸಲು ಚುನಾವಣೆ ಒಂದೇ ದಾರಿ. ಆದುದರಿಂದ ಏಪ್ರಿಲ್ 1983 ರ ಒಳಗೆ ಸಂಘದ ಚುನಾವಣೆ ನಡೆಸಬೇಕೆಂದು, ಹೈಕೋರ್ಟಿನ ನ್ಯಾಯಮೂರ್ತಿಗಳು ಕಾರ್ಮಿಕ ಕಮಿಷನರ್‌ರವರಿಗೆ ಆದೇಶವನ್ನು ಕೊಟ್ಟಿದ್ದರು. ಆದರೂ ಸಹ ಕಾರ್ಮಿಕ ಇಲಾಖೆಯವರು ಸಂಘದ ಚುನಾವಣೆ ನಡೆಸುವುದಕ್ಕೆ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಇರುವುದನ್ನು ಕಂಡು ಕಾರ್ಮಿಕರು ತಾ॥ 31-8-1983 ರಂದು ಒಂದು ದಿವಸದ ಸಾಂಕೇತಿಕ ಮುಷ್ಕರವನ್ನು ನಡೆಸಿ, ಕಾರ್ಮಿಕ ಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಗಳಿಗೂ ಮನವಿ ಪತ್ರವನ್ನು ಸಲ್ಲಿಸಿದ್ದರು. ಈ ಮಧ್ಯೆ ಆಡಳಿತ ವರ್ಗದವರು, ಎಫ್. ಎಂ. ಖಾನ್‌ರವರೊಡನೆ ಬೇಡಿಕೆಗಳ ಬಗ್ಗೆ ಮಾತುಕತೆ ನಡೆಸಿ ಕಾರ್ಮಿಕರ ಬೆನ್ನ ಹಿಂದೆ ತಾ. 8-10-1983 ರಂದು ಒಂದು ಒಪ್ಪಂದವನ್ನು ಮಾಡಿದರು. ಇದನ್ನು ಪ್ರತಿಭಟಿಸಿ ಕಾರ್ಮಿಕರು 1983 ರ ಅಕ್ಟೋಬರ್ 10 ಮತ್ತು 11ನೇ ತಾರೀಖು ಮುಷ್ಕರ ಮಾಡಿದರು. ಈ ಸಂದರ್ಭದಲ್ಲಿ ಲಾಠಿ ಚಾರ್ಜ್, ಅಶ್ರು ವಾಯು ಪ್ರಯೋಗ ಮತ್ತು ಗೋಲಿಬಾರ್‌ಗಳನ್ನು ಪೋಲೀಸರು ಪ್ರಯೋಗ ಮಾಡಿದರು. ಮುಷ್ಕರ ನೂರಕ್ಕೆ ನೂರು ಯಶಸ್ವಿಯಾಗಿ ನಡೆಯಿತು. ಅಂದು ಕಾರ್ಮಿಕ ಇಲಾಖೆಯ, ಪೋಲೀಸ್ ಇಲಾಖೆಯ ಮತ್ತು ಕಾನೂನು ಇಲಾಖೆಯ ಹಿರಿಯ ಅಧಿಕಾರಿಗಳು ಸಭೆಯನ್ನು ನಡೆಸಿ, ಈ ಸಮಸ್ಯೆಯನ್ನು ಬಗೆಹರಿಸಲು ಚುನಾವಣೆ ಒಂದೇ ಮಾರ್ಗ ಎಂಬುವುದನ್ನು ಮನಗಂಡು, ಕಾರ್ಮಿಕ ಕಮಿಷನರ್‌ರವರಿಗೆ ಚುನಾವಣೆ ನಡೆಸಲು ಆದೇಶ ಕೊಟ್ಟರು. ಕಾರ್ಮಿಕ ಕಮಿಷನರ್‌ರವರು, ಲೇಬರ್ ಆಫೀಸರನ್ನು ಚುನಾವಣಾ ಅಧಿಕಾರಿಯಾಗಿ ನೇಮಿಸಿ, ಚುನಾವಣೆಯನ್ನು ನಡೆಸಲು ಏರ್ಪಾಟು ಮಾಡಿದರು.

ಕಾಂ. ಸೂರಿಯವರ ನೇತೃತ್ವದಲ್ಲಿರುವ ಸಂಘದ ಕೋರಿಕೆಯ ಮೇಲೆ, ಈ ಸಂಘದ ಚುನಾವಣೆಯನ್ನು ನಡೆಸಲು, ಕಾರ್ಮಿಕ ಕಮಿಷನರ್‌ರವರು ಏರ್ಪಾಟು ಮಾಡಿದ್ದು ಸರಿಯಿಲ್ಲವೆಂದು ಎಫ್. ಎಂ. ಖಾನ್ ಮತ್ತೆ ಹೈಕೋರ್ಟಿನಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದರು. ಇದರ ಮೇಲೆ ವಾದ ವಿವಾದಗಳ ನಂತರ, ಎರಡು ಕಡೆಯವರ ಸಮ್ಮತಿಯಿಂದ, ಚುನಾವಣೆಯನ್ನು ನಡೆಸಲು ಹೈಕೋರ್ಟಿನವರು ತೀರ್ಪು ಮಾಡಿದರು. ಈ ತೀರ್ಪಿನಲ್ಲಿ ಟ್ರೇಡ್ ಯೂನಿಯನ್ ಆಕ್ಟ್‌ಗೆ ಒಳಪಟ್ಟು, ಹೊರಗಡೆಯವರು ಯಾರು ಬೇಕಾದರೂ ಸ್ಪರ್ಧಿಸಬಹುದು ಎಂದು ಮತ್ತು ಅವರು ಆರಿಸಿ ಬಂದ ಮೇಲೆ ಸಂಘದ ಗೌರವ ಸದಸ್ಯರಾಗಿ ಪರಿಗಣಿಸಲ್ಪಡುತ್ತಾರೆಂದು ಹೇಳಲಾಗಿತ್ತು. ತಾ. 31-12-19 3 ರಂದು ಚುನಾವಣೆ ನಡೆಯಬೇಕಾಗಿತ್ತು. ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನವಾದ ತಾ. 6-12-1983 ರಂದು ಶ್ರೀ ಎಫ್. ಎಂ. ಖಾನ್ ರಿಟ್ ಅರ್ಜಿಯನ್ನು ದಾಖಲು ಮಾಡಿ, ಚುನಾವಣೆಗೆ ತಡೆಯಾಜ್ಞೆ ತಂದರು.

ಕಳೆದ ನಾಲ್ಕು ತಿಂಗಳುಗಳಿಂದ ವಿಚಾರಣೆಯಾಗದೆ ನಿಂತಿದ್ದ ಈ ಅರ್ಜಿ ತಾ. 6-4-1984 ರಂದು ವಿಚಾರಣೆಗೆ ತೆಗೆದುಕೊಂಡು, ವಾದ ವಿವಾದಗಳ ನಂತರ, ಸಂಘದ ಚುನಾವಣೆಗೆ ಮೊದಲು ಸಂಘದ ಗೌರವ ಸದಸ್ಯರ ಚುನಾವಣೆ ನಡೆಯುವುದೆಂದು ತೀರ್ಮಾನಿಸಲಾಯಿತು. ಈ ಚುನಾವಣೆಯಲ್ಲಿ ಹೊರಗಡೆಯವರನ್ನು ಗೌರವ ಸದಸ್ಯರಾಗಿ ತೆಗೆದುಕೊಳ್ಳಬೇಕೆ, ಬೇಡವೆ ಎಂಬುದನ್ನು ಮತ್ತು ಹಾಗೆ ಬೇಕೆಂದಾರೆ ಯಾರು ಎಂಬುವುದನ್ನು ತೀರ್ಮಾನಿಸಲು ಶೇಕಡ 50 ಕ್ಕಿಂತ ಹೆಚ್ಚಿನ ಮತ ಪಡೆದವರು ಮಾತ್ರ ಅರ್ಹರಾಗುತ್ತಾರೆಂದು ತೀರ್ಮಾನಿಸಲಾಯಿತು. ಈ ಚುನಾವಣೆಯನ್ನು ನಡೆಸಲು ಹೈಕೋರ್ಟಿನವರೇ ಇಬ್ಬರು ವಕೀಲರುಗಳನ್ನು ಚುನಾವಣಾ ಕಮಿಷನರ್‌ಗಳಾಗಿ ನೇಮಕ ಮಾಡಿ ತಾ. 15-4-1984 ರಂದು ಬೆಳಿಗ್ಗೆ 7-30 ಘಂಟೆಗೆ ಸರ್ವಸದಸ್ಯರ ಸಭೆಯ ನಂತರ 10 00 ಗಂಟೆಯಿಂದ, ಸಂಜೆ 5-00 ಗಂಟೆಯವರೆಗು ಮತ್ತು ರಾತ್ರಿ 10-00 ಗಂಟೆಯಿಂದ 12-00 ರ ವರೆಗು ಕಾರ್ಖಾನೆಯ ಒಳಗೆ ಚುನಾವಣೆ ನಡೆಸಲಾಯಿತು.

ಈ ಚುನಾವಣೆಯಲ್ಲಿ ಕಾ. ಸೂರಿಯವರು 2654 ಮತಗಳನ್ನು ಪಡೆದು (ಶೇಕಡ 68 ರಷ್ಟು) ಶ್ರೀ ಎಫ್. ಎಂ. ಖಾನ್ ರವರನ್ನು ಪರಾಜಯಗೊಳಿಸಿದಾರೆ. ಶ್ರೀ ಎಫ್. ಎಂ. ಖಾನ್ 1635 ಮತಗಳನ್ನು ಪಡೆದಿದ್ದಾರೆ. (ಶೇಕಡ 38)

ಈ ಫಲಿತಾಂಶವನ್ನು ಕಮಿಷನರ್‌ಗಳು ಹೈಕೋರ್ಟಿಗೆ ತಾ. 17-4-84 ರಂದು ತಿಳಿಸಿದರು. ಮತದಾರರ ಪಟ್ಟಿಯಲ್ಲಿ ಕಾ. ಸೂರಿಯವರ ಒಬ್ಬರ ಹೆಸರನ್ನು ಮಾತ್ರ, ಗೌರವ ಸದಸ್ಯರೆಂದು ಸೇರ್ಪಡಿಸಿ ಸಂಘದ ಮುಂದಿನ ಪದಾಧಿಕಾರಿಗಳನ್ನು, ಕಾರ್ಯಕಾರಿ ಸಮಿತಿ ಮತ್ತು ಜನರಲ್ ಕೌನ್ಸಿಲ್ ಸದಸ್ಯರನ್ನು ಚುನಾಯಿಸಲು, ಚುನಾವಣೆ ನಡೆಸುವಂತೆ, ಈ ಮೊದಲೆ ಕಾರ್ಮಿಕ ಕಮಿಷನರ್‌ರವರು ನೇಮಕ ಮಾಡಿರುವ ಚುನಾವಣಾ ಅಧಿಕಾರಿಗಳಿಗೆ ಹೈಕೋರ್ಟಿನವರು ಆದೇಶ ನೀಡಿದ್ದಾರೆ.

ಪ್ರಜಾಪ್ರಭುತ್ವ ಚಳುವಳಿಯ ಮುನ್ನಡೆ

[1ನೇ ಪುಟದಿಂದ]

ಸಮಾವೇಶದಲ್ಲಿ ಮಾತನಾಡಿದ ಕಾಶ್ಮೀರದ ಮಂತ್ರಿ ಮಹಮದ್ ಷಫಿಯವರು ಫರೂಕ್ ಅಬ್ದುಲ್ಲಾರ ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್ (ಐ) ಮಾಡುತ್ತಿರುವ ಪ್ರಯತ್ನಗಳನ್ನು ವಿವರಿಸಿದರು.

ಸಮಾವೇಶದಲ್ಲಿ ಮಾತನಾಡಿದ ಅನೇಕ ಮುಖಂಡರು ದೇಶವು ಛಿದ್ರವಾಗುವ ಅಪಾಯದ ಬಗ್ಗೆ ಗಮನ ಸೆಳೆದು ಕಾಂಗ್ರೆಸ್ (ಐ) ಪಕ್ಷವು ತನ್ನ [illegible] ಜೇಯಿಸಲು ದೇಶವನ್ನು ಅಸ್ಥಿರಗೊಳಿಸುವ ಶಕ್ತಿಗಳನ್ನು ಹುಂಬಿಟ್ಟಿದೆ ಎಂದು ಸಾರಿದರು.

ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ನಂಬೂದಿರಿಪಾದರು ಪಂಜಾಬ್ ಬರೀ ಕಾನೂನು ವ್ಯವಸ್ಥೆಯ ಪ್ರಶ್ನೆಯಲ್ಲ. ಅದು ಒಂದು ರಾಜಕೀಯ ಪ್ರಶ್ನೆಯಾಗಿದೆ ಎಂದು ಹೇಳಿ ಅದರ ಶೀಘ್ರ ಪರಿಹಾರಕ್ಕೆ ಒತ್ತಾಯಿಸಿದರು. ಯೋಜನಾ ಆಯೋಗದ ಸ್ಥಾನಮಾನಗಳನ್ನು ನಿರ್ಧರಿಸಿ ಅದಕ್ಕೂ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೂ ಇರುವ ಸಂಬಂಧವನ್ನು ಸ್ಪಷ್ಟಪಡಿಸಬೇಕು, ಹಣಕಾಸಿನ ವಿತರಣೆಯಲ್ಲಿ ಕೇಂದ್ರ ಸರ್ಕಾರಕ್ಕಿರುವ ಸ್ವೇಚ್ಛೆಯ ಹಕ್ಕು ಕೊನೆಯಾಗಬೇಕು, ಎಂದು ಅವರು ಹೇಳಿದರು.

ಮೊದಲನೆಯ ಸಮಾವೇಶದಲ್ಲಿ ಭಾಗವಹಿಸಿದ ಭಾಜಪ ಅನಂತರ ನಡೆದ ಸಮಾವೇಶಗಳಿಂದ ಹೊರಗುಳಿಯಿತು. ಎರಡನೆಯ ಸಮಾವೇಶದ ನಂತರ ಲೋಕದಳವು ದೂರವಾಯಿತು. ಮೂರನೆಯ ಸಮಾವೇಶದ ನಂತರ ವಿರೋಧ ಪಕ್ಷಗಳ ಕೂಟವು ಜನಸಾಮಾನ್ಯರನ್ನು ಬಾಧಿಸುವ ಪ್ರಶ್ನೆಗಳನ್ನು ಕೈಗೆತ್ತಿಕೊಂಡಿತು.

ದೇಶದ ಜನತೆಯ ಆರ್ಥಿಕ, ರಾಜಕೀಯ ಪ್ರಶ್ನೆಗಳಿಗಾಗಿ ಜನಸಮುದಾಯವನ್ನು ಚಳುವಳಿಗೆ ಇಳಿಸಲು ಹೊರಟ ಈ ಸಮಾವೇಶವು ಪ್ರಜಾಪ್ರಭುತ್ವ ಚಳುವಳಿಯ ಹಾದಿಯಲ್ಲಿ ಮುನ್ನಡೆದಿದೆ.

(ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು)

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore 560053. Editorial and managerial office, L 56, K. V. Temple Street, Sultanpet. B-53. Phone : 24154
Editor : P. Ramachandra Rao
Managing Editor : N. K. Upadhyaya